# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:01 Volume:01 • ಸಂಚಿಕೆ:315 Issue:315 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 16.05.2024 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2







# ರೈತರ ಬ್ಯಾಂಕ್ ಖಾತೆ ನಿಷ್ಕ್ರಿಯ ಬೆಳೆ ಪರಿಹಾರ ಮೊತ್ತ ವಾಪಸ್ : ಡಿಸಿ

**ಜಿಲ್ಲೆಯ 9,854 ರೈತರ ಖಾತೆಗಳಿಗೆ ಜಮಾ ಆಗದೆ ಹಣ ವಾಪಸ್ಸು | ಆಧಾರ್, ಪಹಣಿಯಲ್ಲಿರುವ ಹೆಸರೂ ಒಂದೇ ಆಗಿರಬೇಕು.**

**ಗೊಂದಲಗಳು ಇದ್ದಲ್ಲಿ ಕೂಡಲೇ ಸಮೀಪದ ಕೃಷಿ ಇಲಾಖೆ ಅಥವಾ ತಾಲ್ಲೂಕು ಕಚೇರಿಯ ಸಹಾಯವಾಣಿ ಕೇಂದ್ರ ಸಂಪರ್ಕಿಸಿ**

**ಹಂಪಿ ಟೈಮ್ಸ್ ಹೊಸಪೇಟೆ**

ಅಕೌಂಟ್ ಇನ್‌ವ್ಯಾಲಿಡ್, ಕ್ಲೋಸ್, ಬ್ಲಾಕ್, ಆಧಾರ್ ನಾಟ್ ಸೀಡಿಂಗ್ ಹಾಗೂ ಇತರೆ ತಾಂತ್ರಿಕ ಕಾರಣಗಳ ಸಮಸ್ಯೆಯಿಂದಾಗಿ ವಿಜಯನಗರ ಜಿಲ್ಲೆಯ ಕೆಲವು ರೈತರ ಖಾತೆಗಳಿಗೆ ಬೆಳೆ ಪರಿಹಾರದ ಮೊತ್ತವು ತಲುಪದೇ ವಾಪಸ್ಸು ಬಂದಿದ್ದು, ರೈತರು ಈ ಬಗ್ಗೆ ಕೂಡಲೇ ಪರಿಶೀಲಿಸಿ, ಅಕೌಂಟ್ ಬ್ಲಾಕ್ ಆಗಿದ್ದಲ್ಲಿ ರಿ ಓಪನ್ ಮಾಡಿಸಿಕೊಂಡು ಸೌಲಭ್ಯ ಪಡೆಯಬೇಕು ಎಂದು ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದ್ದಾರೆ.

2023-24ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ವಿಜಯನಗರ ಜಿಲ್ಲೆಯಲ್ಲಿ ಬರ ಪರಿಸ್ಥಿತಿಯಿಂದ ಉಂಟಾದ ಬೆಳೆಹಾನಿಗೆ ಸಂಬಂಧಿಸಿದಂತೆ ಜಿಲ್ಲೆಯ 1,09,543 ರೈತರಿಗೆ ಬೆಳೆ ಪರಿಹಾರದ ಮೊತ್ತವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದ್ದು, ಈ ಪೈಕಿ 9,854 ರೈತರ ಖಾತೆಗಳಿಗೆ ಕೆಲವು ಕಾರಣಗಳಿಂದ ಹಣ ತಲುಪದೇ ವಾಪಸ್ಸು ಬಂದಿರುತ್ತದೆ.

ಕೆಲವು ರೈತರ ಖಾತೆಗಳಿಗೆ ಪರಿಹಾರದ ಹಣ ಜಮೆಯಾಗದೇ ಇರಲು ರೈತರ ಹೆಸರು ಆಧಾರ್ ಮತ್ತು ಫ್ರುಟ್ಸ್ ಮ್ಯಾಚ್ ಆಗದೇ ಇರುವುದು, ರೈತರ ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆ ಆಗದೇ ಇರುವುದು., ರೈತರ ಬ್ಯಾಂಕ್‌ನ ಐ.ಎಫ್.ಎಸ್.ಸಿ ಕೋಡ್ ಸರಿ ಇರದೇ ಇರುವುದು., ರೈತರ ಬ್ಯಾಂಕ್ ಖಾತೆ ನಿಷ್ಕ್ರಿಯ ಆಗಿರುವುದು ಮತ್ತು ಇತರೆ ಕಾರಣಗಳಿಂದ ಎಂದು ತಿಳಿದು ಬಂದಿರುತ್ತದೆ.

ಈ ಬಗ್ಗೆ ರೈತರು ಗಮನ ಹರಿಸಬೇಕು. ರೈತರು ಮೊದಲು ಜಮೀನಿನ ಪಹಣಿಗೆ ತಮ್ಮ ಫ್ರುಟ್ಸ್ ಐಡಿ ಸಂಖ್ಯೆ ಇದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಿಕೊಳ್ಳಬೇಕು., ತಮ್ಮ ಬ್ಯಾಂಕ್ ಖಾತೆಗೆ ಎನ್‌ಪಿಸಿಐ ಲಿಂಕ್ ಆಗಿದೆಯೇ ಇಲ್ಲವೋ ಎಂಬುದನ್ನು ಪರಿಶೀಲಿಸಿಕೊಳ್ಳಬೇಕು., ಎನ್‌ಪಿಸಿಐ ಲಿಂಕ್ ಇದ್ದಲ್ಲಿ ಇದ್ದಲ್ಲಿ ಎಫ್‌ಐಡಿ (ಫ್ರುಟ್ ಐಡಿ) ಇರತಕ್ಕಂತಹ ಬ್ಯಾಂಕ್ ಖಾತೆ ಖಾತೆ ಸಂಖ್ಯೆಗೂ ಎನ್‌ಪಿಸಿಐ ಲಿಂಕ್ ಇರುವ ಸಂಖ್ಯೆಯೂ ಒಂದೇ ಆಗಿರತಕ್ಕದ್ದು., ಎನ್‌ಪಿಸಿಐ ಲಿಂಕ್ ಹಾಗೂ ಫ್ರುಟ್ ಐಡಿನಲ್ಲಿ ಇರತಕ್ಕಂತಹ ಬ್ಯಾಂಕ್ ಖಾತೆ ಸಂಖ್ಯೆ ಬೇರೆ ಬೇರೆ ಇದ್ದಲ್ಲಿ ಎಫ್‌ಐಡಿಯಲ್ಲಿ ಇರುವ ಬ್ಯಾಂಕ್ ಖಾತೆ ಸಂಖ್ಯೆಯನ್ನು ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರಕ್ಕೆ ಹೋಗಿ ಬದಲಾವಣೆ ಮಾಡಿಸಿಕೊಳ್ಳುವುದು., ಆಧಾರ್ ಕಾರ್ಡ್‌ನಲ್ಲಿ ಇರುವ ಹೆಸರಿಗೂ ಬ್ಯಾಂಕ್ ಖಾತೆಯಲ್ಲಿ ಇರುವ ಹೆಸರೂ ಒಂದೇ ಆಗಿರಬೇಕು., ಅಕೌಂಟ್ ಇನ್-ವ್ಯಾಲಿಡ್, ಕ್ಲೋಸ್, ಬ್ಲಾಕ್, ಆಧಾರ್ ನಾಟ್ ಸೀಡಿಂಗ್ ಹಾಗೂ ಇತರೆ ತಾಂತ್ರಿಕ ಕಾರಣಗಳಿಂದ ಸ್ಥಗಿತಗೊಳ್ಳುತ್ತಿದ್ದು ಪರಿಶೀಲಿಸಿಕೊಂಡು ಚಾಲ್ತಿ ಮಾಡಿಸಿಕೊಳ್ಳುವುದು. ಆಧಾರ್ ಕಾರ್ಡ್‌ನಲ್ಲಿ ಇರುವ ಹೆಸರಿಗೂ ಪಹಣಿ ಪತ್ರಿಕೆಯಲ್ಲಿ ಇರುವ ಹೆಸರೂ ಒಂದೇ ಆಗಿರಬೇಕು. ಮುಂದುವರೆದು https://parihara.karnataka.gov.in/service92 ಈ ವೆಬ್‌ಸೈಟಗೆ ಹೋಗಿ ಪರಿಶೀಲಿಸಿಕೊಳ್ಳಬೇಕು.



ಸರ್ಕಾರದಿಂದ ಇನ್ನು ಹಂತಹಂತವಾಗಿ ಪರಿಹಾರದ ಹಣವನ್ನು ಜಮೆ ಮಾಡಲಾಗುತ್ತಿರುತ್ತದೆ. ಈ ಮಾಹಿತಿಯು ತಮಗೆ ಅರ್ಥವಾಗದೇ ಗೊಂದಲಗಳು ಇದ್ದಲ್ಲಿ ಕೂಡಲೇ ಸಮೀಪದ ಕೃಷಿ ಇಲಾಖೆ ಅಥವಾ ತಾಲ್ಲೂಕು ಕಚೇರಿಯ ಸಹಾಯವಾಣಿ ಕೇಂದ್ರವನ್ನು ಸಂಪರ್ಕಿಸಲು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

2023-24ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ವಿಜಯನಗರ ಜಿಲ್ಲೆಯಲ್ಲಿ ಬರಪರಿಸ್ಥಿತಿಯಿಂದ ಉಂಟಾದ ಬೆಳೆಹಾನಿಗೆ ಎಸ್.ಡಿ.ಆರ್.ಎಫ್ ಎನ್.ಡಿ.ಆರ್.ಎಫ್ ಮಾರ್ಗಸೂಚಿಯಂತೆ ಅರ್ಹತೆಯ ಅನುಗುಣವಾಗಿ ಈಗಾಗಲೇ ಮೊದಲನೇ ಹಂತದಲ್ಲಿ ಅರ್ಹ ರೈತರಿಗೆ ಗರಿಷ್ಟ 2000 ರೂ.ವರೆಗೆ ಅರ್ಹತೆಯಂತೆ ಪಾವತಿಸಿರುವ ಬೆಳೆಹಾನಿ ಪರಿಹಾರ ಮೊತ್ತವನ್ನು ಪರಿಗಣನೆಗೆ ತೆಗೆದುಕೊಂಡು ಅರ್ಹತೆಯಂತೆ ಇನ್ನುಳಿದ ಬಾಕಿ ಬೆಳೆಹಾನಿ ಪರಿಹಾರ ಮೊತ್ತವನ್ನು ಪಾವತಿಸಲು ಅನುದಾನ ಬಿಡುಗಡೆ ಮಾಡಿ ಸರ್ಕಾರದಿಂದ ಆದೇಶಿಸಲಾಗಿದೆ. ಅದರಂತೆ ಬೆಳೆ ಸಮೀಕ್ಷೆ ದತ್ತಾಂಶದ ಮಾಹಿತಿಯ ಆಧಾರದ ಮೇಲೆ ಫ್ರುಟ್ಸ್ ಐಡಿ ಹೊಂದಿರುವ ರೈತರಿಗೆ ಪರಿಹಾರ ತಂತ್ರಾಂಶದ ಮೂಲಕ ಹಂತಹಂತವಾಗಿ ಪರಿಹಾರ ವಿತರಣೆ ಮಾಡಲಾಗುತ್ತಿದ್ದು, ವಿಜಯನಗರ ಜಿಲ್ಲೆಯಲ್ಲಿ ಈವರೆಗೂ ಎರಡನೇ ಹಂತದಲ್ಲಿ ಒಟ್ಟು 1,09,543 ರೈತರಿಗೆ 130,08,07,810 ರೂ. ಇನ್ಪುಟ್ ಸಬ್ಸಿಡಿಯನ್ನು ಫ್ರುಟ್ಸ್ ಐಡಿನಲ್ಲಿರುವ ವಿಸ್ತೀರ್ಣವನ್ನು ಕ್ರಾಫ್ ಸರ್ವೆ ಯೊಂದಿಗೆ ಜೋಡಣೆ ಮಾಡಿ ತಂತ್ರಾಂಶದ ಮುಖಾಂತರ ರೈತರ ಖಾತೆಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ. ಅಕೌಂಟ್ ಬ್ಲಾಕ್ ಆಗಿದ್ದಲ್ಲಿ ಅಥವಾ ಕ್ಲೋಸ್ ಆಗಿದ್ದಲ್ಲಿ ಅಂತಹ ರೈತರು ಕೂಡಲೇ ಬ್ಯಾಂಕ್‌ಗಳಿಗೆ ಹೋಗಿ ರಿ ಓಪನ್ ಮಾಡಿಸಬೇಕು. ಫ್ರುಟ್ಸ್ ತಂತ್ರಾಂಶದಲ್ಲಿ ತಮ್ಮ ಹೆಸರನ್ನು ಅಪ್‌ಡೇಟ್ ಮಾಡಿಸಬೇಕು. ಬ್ಯಾಂಕ್ ಖಾತೆಯೊಂದಿಗೆ ಆಧಾರ್ ಜೋಡಣೆಯಾಗದೇ ಇದ್ದಲ್ಲಿ, ಬ್ಯಾಂಕ್ ಖಾತೆಯೊಂದಿಗೆ ಆಧಾರ್ ಜೋಡಣೆಯಾಗದೇ ಇದ್ದಲ್ಲಿ ಅಥವಾ ಫೇಲ್ಡ್ ಪೇಮೆಂಟ್ ಆಗಿದ್ದಲ್ಲಿ, ಐಎಫ್‌ಎಸ್‌ಸಿ ಕೋಡ್ ಇನ್‌ವಾಲಿಡ್ ಇದ್ದಲ್ಲಿ ಅಥವಾ ಎನ್‌ಪಿಸಿಐ ಜೋಡಣೆ ಮಾಡದೇ ಇದ್ದಲ್ಲಿ ರೈತರು ಕೂಡಲೇ ಬ್ಯಾಂಕ್‌ಗೆ ಹೋಗಿ ಎನ್‌ಪಿಸಿಐ, ಐಎಫ್‌ಎಸ್‌ಸಿ ಕೋಡನ್ನು ಅಪ್‌ಡೇಟ್ ಮಾಡಿಸಬೇಕು ಎಂದು ತಿಳಿಸಿದ್ದಾರೆ.

## ಇಂದು ಹೊಸಪೇಟೆ ವಿವಿಧೆಡೆ ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆಯ 33/11 ಕೆವಿ ವಿದ್ಯುತ್ ವಿತರಣಾ ಕೇಂದ್ರವ್ಯಾಪ್ತಿಗೆ ಒಳಪಡುವ ಸುತ್ತಲಿನ ಪ್ರದೇಶದಲ್ಲಿ ಮೇ 16 ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆವರೆಗೆ ಮೆಂಟೆನೆನ್ಸ್ ವರ್ಕ್ ಹಾಗೂ ಇತರೆ ದುರಸ್ತಿ ಕಾರ್ಯ ಹಮ್ಮಿಕೊಂಡಿರುವುದರಿಂದ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ನಗರದ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಗೊಳಪಡುವ ಸುತ್ತಲಿನ ಪ್ರದೇಶಗಳಾದ ಬಸವೇಶ್ವರ ಬಡಾವಣೆ, ಜಬ್ಬಲ್ ಸರ್ಕಲ್, ಪುನಿತ್‌ರಾಜಕುಮಾರ ಸರ್ಕಲ್, ರಾಜೀವ ನಗರ, ರೆಲ್ವೆ ಸ್ಟೇಷನ್, ಅಮರಾವತಿ, ಚಿತ್ತವಾಡಗಿ, ಶುಗರ್ ಫ್ಯಾಕ್ಟರಿ, ಹಂಪಿರೋಡ್, ಗಣೇಶ ಗುಡಿ, ನೌಕರರ ಕಾಲೋನಿ, ಗಾಂಧಿ ಸರ್ಕಲ್, ಬಸ್ ಸ್ಟ್ಯಾಂಡ್, ಮೇನ್ ಬಜಾರ್, ಕೋಟ್, ರಾಣಿಪೇಟೆ, ಭಟ್ರಹಳ್ಳಿ, ಬೆನಕಾಪುರ, ಬಸವನದುರ್ಗ, ನಾಗೇನಹಳ್ಳಿ ಹಾಗೂ ನರಸಾಪುರ ಭಾಗದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು ಸಾರ್ವಜನಿಕರು, ಗ್ರಾಹಕರು ಸಹಕರಿಸಬೇಕು ಎಂದು ಹೊಸಪೇಟೆಯ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ.

## ಮೇ 16ಕ್ಕೆ ರಾಷ್ಟ್ರೀಯ ಡೆಂಗಿ ದಿನಾಚರಣೆ; ಬೈಕ್ ರ‍್ಯಾಲಿ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ 'ರಾಷ್ಟ್ರೀಯ ಡೆಂಗಿ ದಿನಾಚರಣೆ' ಅಂಗವಾಗಿ 'ಸಮುದಾಯದೊಂದಿಗೆ ಸೇರಿ ಡೆಂಗಿ ಜ್ವರವನ್ನು ನಿಯಂತ್ರಿಸೋಣ' ಎಂಬ ಘೋಷವಾಕ್ಯದೊಂದಿಗೆ ಸಮುದಾಯದಲ್ಲಿ ಡೆಂಗಿ ಜ್ವರದ ಬಗ್ಗೆ ಅರಿವು ಮೂಡಿಸಲು ಮೇ 16 ರಂದು ಬೆಳಿಗ್ಗೆ 09.30 ಗಂಟೆಗೆ ಜಿಲ್ಲಾ ಆಸ್ಪತ್ರೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯಿಂದ ಬೈಕ್‌ರ‍್ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಅಬ್ದುಲ್ಲಾ ತಿಳಿಸಿದ್ದಾರೆ.

## ಶ್ರೀಕರಿ ಪಬ್ಲಿಕ್ ಶಾಲೆಗೆ ಸಿಬಿಎಸ್‌ಇ ಪರೀಕ್ಷೆಯಲ್ಲಿ ಎಸ್ಸೆಸ್ಸೆಲ್ಸಿ ಶೇ.100, ಪಿಯು ಶೇ.96ರಷ್ಟು ಫಲಿತಾಂಶ

**ವಿದ್ಯಾರ್ಥಿಗಳ ಸಾಧನೆಗೆ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ಹರ್ಷ**



ಪಿಯುಶ್ ಆರ್ಯ 476/ಶೇ.95.2 | ವೇದ ಕಾರ್ವ 470/ಶೇ.94 | ಲಿಖಿತ 470/ಶೇ.94 | ಅನಘು ಸಿಜು 461/ಶೇ.92.2 | ಎನ್ ಪೂಜಿತ 436/ಶೇ.87.2 | ಕೀರ್ತಿ 434/ಶೇ.86.8

**ಹಂಪಿ ಟೈಮ್ಸ್ ಹೊಸಪೇಟೆ**

ಸಿಬಿಎಸ್‌ಇ 10ನೇ ತರಗತಿ ಮತ್ತು ಸಿಬಿಎಸ್‌ಇ 12ನೇ ತರಗತಿ ಪರೀಕ್ಷೆ ಫಲಿತಾಂಶ ಪ್ರಕಟಗೊಂಡಿದ್ದು, ನಗರದ ಅನಂತಶಯನಗುಡಿ ಶ್ರೀಕರಿ ಪಬ್ಲಿಕ್ ಶಾಲೆ ಶಾಲೆಯು ಎಸ್ಸೆಸ್ಸೆಲ್ಸಿಯಲ್ಲಿ ಶೇ.100 ರಷ್ಟು ಮತ್ತು 12ನೇ ತರಗತಿಯಲ್ಲಿ ಶೇ.96ರಷ್ಟು ಫಲಿತಾಂಶ ಪಡೆದಿದೆ.

ಎಸ್ಸೆಸ್ಸೆಲ್ಸಿಯಲ್ಲಿ ಪಿಯುಶ್ ಆರ್ಯ 500ಕ್ಕೆ 476 ಅಂಕ ಪಡೆದು ಶೇ.95.2 ರಷ್ಟು ಫಲಿತಾಂಶ ಪಡೆದು ಶಾಲೆಗೆ ಪ್ರಥಮನಾಗಿದ್ದಾನೆ. ವೇದ ಕಾರ್ವ ಮತ್ತು ಲಿಖಿತ ತಲಾ 470 ಅಂಕ ಪಡೆದು ಶೇ.94 ರಷ್ಟು ಫಲಿತಾಂಶ ಪಡೆದು ದ್ವಿತೀಯ ಸ್ಥಾನ ಪಡೆದಿದ್ದಾರೆ.

12ನೇ ತರಗತಿಯಲ್ಲಿ ಅನಘು ಸಿಜು 500ಕ್ಕೆ 461 ಅಂಕ ಪಡೆದು ಶೇ.92.2 ರಷ್ಟು ಫಲಿತಾಂಶ ಪಡೆದರೆ, ಎನ್ ಪೂಜಿತ 436 ಅಂಕ ಪಡೆದು 87.2 ಫಲಿತಾಂಶ, ಕೀರ್ತಿ 434 ಅಂಕ ಪಡೆದು ಶೇ.86.8 ಫಲಿತಾಂಶ ಪಡೆದಿದ್ದಾರೆ.

ಎಸ್ಸೆಸ್ಸೆಲ್ಸಿಯಲ್ಲಿ 63 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 63 ವಿದ್ಯಾರ್ಥಿಳು ಉತ್ತೀರ್ಣರಾಗಿದ್ದಾರೆ. 36 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 17 ಪ್ರಥಮ, 10 ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. 12ನೇ ತರಗತಿಯಲ್ಲಿ 24 ವಿದ್ಯಾರ್ಥಿಗಳ ಪೈಕಿ 23 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, 14 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಮತ್ತು 9 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಪಾಸಾಗಿದ್ದಾರೆ ಎಂದು ಆಡಳಿತ ಮಂಡಳಿ ಅಧ್ಯಕ್ಷರಾದ ಡಾ.ಎಸ್.ದೇವಿಕ ಮಾಲಿನಿ ಮತ್ತು ಪ್ರಾಂಶುಪಾಲರಾದ ಎಸ್. ರೇಖಾ ತಿಳಿಸಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

## ಡಾಟಾ ಸರಿಪಡಿಸಲು ಕೃಷಿ, ತೋಟಗಾರಿಕಾ ಅಧಿಕಾರಿಗಳಿಗೆ ಸೂಚನೆ




**ಹಂಪಿ ಟೈಮ್ಸ್ ಹೊಸಪೇಟೆ**

2023-24ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆಹಾನಿಗೆ ಬೆಳೆ ಪರಿಹಾರದ ಮೊತ್ತ ಸಂದಾಯಕ್ಕೆ ಸಂಬಂಧಿಸಿದಂತೆ ಹಂತ-1 ರಿಂದ ಹಂತ-9ರವರೆಗೆ ವಿಜಯನಗರ ಜಿಲ್ಲೆಗೆ ಸ್ವೀಕೃತವಾಗಿರುವ ಡಾಟಾವನ್ನು ಕೂಡಲೇ ಸರಿಪಡಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಅನುರಾಧ ಜಿ ಅಧಿಕಾರಿಗಳಿಗೆ ಸೂಚಿಸಿದರು.

ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಇತ್ತೀಚೆಗೆ ನಡೆಸಿದ ವಿಡಿಯೋ ಸಂವಾದದ ಬಳಿಕ ಅವರು ಜಿಲ್ಲಾಡಳಿತ ಭವನದಲ್ಲಿನ ಕೇಸ್ವಾನ್ ಹಾಲ್‌ನಲ್ಲಿ ಕೃಷಿ ಹಾಗೂ ತೋಟಗಾರಿಕಾ ಇಲಾಖೆಯ ಅಧಿಕಾರಿಗಳೊಂದಿಗೆ ಬೆಳೆ ಪರಿಹಾರದ ಮೊತ್ತ ಸಂದಾಯದ ಪ್ರಕ್ರಿಯೆಯ ಬಗ್ಗೆ ಚರ್ಚಿಸಿದರು. ಯಾವ ಬಗೆಯ ತಾಂತ್ರಿಕ ಕಾರಣಗಳಿಂದ ಜಿಲ್ಲೆಯ ಇನ್ನು ಕೆಲವು ರೈತರ ಖಾತೆಗಳಿಗೆ ಬೆಳೆ ಪರಿಹಾರದ ಮೊತ್ತ ಸಂದಾಯವಾಗಿಲ್ಲ ಎಂಬುದರ ಬಗ್ಗೆ ಮಾಹಿತಿಯ ಡಾಟಾವನ್ನು ಈಗಾಗಲೇ ಕೃಷಿ ಇಲಾಖೆ, ತೋಟಗಾರಿಕಾ ಇಲಾಖೆಗಳಿಗೆ ಕಳುಹಿಸಲಾಗಿದೆ. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಈ ಬಗ್ಗೆ ತಮ್ಮ ತಮ್ಮ ಹಂತದಲ್ಲಿ ತುರ್ತು ಕ್ರಮವಹಿಸಿ ವರದಿ ನೀಡಬೇಕು ಎಂದು ಅವರು ಇದೆ ವೇಳೆ ನಿರ್ದೇಶನ ನೀಡಿದರು.

ಬೆಳೆ ಪರಿಹಾರದ ಮೊತ್ತ ಪಡೆಯುವಲ್ಲಿ ಕೆಲವು ರೈತರಿಗೆ ಎದುರಾಗಿರುವ ತಾಂತ್ರಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಂಬಂಧಿಸಿದ ಅಧಿಕಾರಿಗಳು ಸರಿಯಾಗಿ ಸಮನ್ವಯ ಮಾಡಬೇಕು ಎಂದು ನಿರ್ದೇಶನ ನೀಡಿದರು. ವಿಡಿಯೋ ಸಂವಾದದಲ್ಲಿ ಜಂಟಿ ಕೃಷಿ ನಿರ್ದೇಶಕರಾದ ರಮೇಶ, ತೋಟಗಾರಿಕಾ ಇಲಾಖೆಯ ಉಪ ನಿರ್ದೇಶಕರಾದ ಚಿದಾನಂದ ಹಾಗೂ ಇನ್ನೀತರ ಇಲಾಖೆಗಳ ಅಧಿಕಾರಿಗಳು ಇದ್ದರು.






## ಘನ, ದ್ರವ ತ್ಯಾಜ್ಯ ನಿರ್ವಹಣೆ ನಿಯಮ ಪಾಲಿಸಿ: ಜಿಲ್ಲಾಧಿಕಾರಿ ದಿವಾಕರ ಸೂಚನೆ

**ಹಂಪಿ ಟೈಮ್ಸ್ ಹೊಸಪೇಟೆ**

ಘನತ್ಯಾಜ್ಯ ವಸ್ತು ವಿಲೇವಾರಿ ಕುರಿತಂತೆ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪೀಠದಲ್ಲಿ ದಾಖಲಾಗಿರುವ ಪ್ರಕರಣ ಸಂಖ್ಯೆ:06/2018ರಲ್ಲಿ ನಗರ ಸ್ಥಳೀಯ ಸಂಸ್ಥೆಗಳು ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ನಿರ್ದೇಶನಗಳ ಪಾಲನೆ ಮಾಡುವ ವಿಷಯದ ಕುರಿತು ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಭೆ ನಡೆಯಿತು.



ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರುಗಳು, ಪರಿಸರ ಇಲಾಖೆ ಮತ್ತು ಜಿಲ್ಲಾ ವಾಯುಮಾಲಿನ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಜಿಲ್ಲಾಧಿಕಾರಿಗಳು, ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ನಿರ್ದೇಶನಗಳ ಪಾಲನೆಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

ಘನ ಘನತ್ಯಾಜ್ಯ ನಿರ್ವಹಣೆ, ಪಾರಂಪರಿಕ ತ್ಯಾಜ್ಯ ನಿರ್ವಹಣೆ, ದ್ರವ ತ್ಯಾಜ್ಯ ನಿರ್ವಹಣೆಯ ಬಗ್ಗೆ ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ನಿರ್ದೇಶನಗಳನ್ನು ಪಾಲಿಸುವ ಸಂಬಂಧ ನ್ಯಾಯಾಧೀಕರಣಕ್ಕೆ ಸಲ್ಲಿಸಿರುವ ಅಫಿಡೇವಿಟ್‌ನಲ್ಲಿನ ಅಂಶಗಳನ್ನು ನಿಗದಿತ ಸಮಯದೊಳಗೆ ಕಾರ್ಯಗತಗೊಳಿಸುವಲ್ಲಿ ನಿರ್ಲಕ್ಷ್ಯತನ ತೋರಿದಲ್ಲಿ ಅಂತವರ ವಿರುದ್ಧ ಕಠಿಣ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಇದೆ ವೇಳೆ ಜಿಲ್ಲಾಧಿಕಾರಿಗಳು ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಮನೋಹರ್, ನಗರಸಭೆಯ ಪೌರಾಯುಕ್ತರು, ಕಾರ್ಯಪಾಲಕ ಅಭಿಯಂತರರಾದ ನಾಗರಾಜ, ಸಹಾಯಕ ಕಾರ್ಯಪಾಲಕ ಅಭಿಯಂತರರಾದ ವೀರೇಶ್, ಶಿಲ್ಪಾಶ್ರೀ ಹಾಗೂ ಪರಿಸರ ಅಭಿಯಂತರರಾದ ಜಗದೀಶ್ ಮತ್ತು ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು ಉಪಸ್ಥಿತರಿದ್ದರು.

## ಖಾತಾ ಬದಲಾವಣೆ, ಉದ್ದಿಮೆ ಪರವಾನಿಗೆ ಸೇವೆಗಳಿಗೆ ಮೇಲುಸ್ತುವಾರಿ ಅಧಿಕಾರಿ ನೇಮಕ

**ಹಂಪಿ ಟೈಮ್ಸ್ ಹೊಸಪೇಟೆ**

ಖಾತಾ ಬದಲಾವಣೆ, ನಮೂನೆ-3 ಉದ್ದಿಮೆ ಪರವಾನಿಗೆ, ಕಟ್ಟಡ ಪರವಾನಿಗೆ ಸೇರಿದಂತೆ ಇನ್ನೀತರೆ ಸೇವೆಗಳನ್ನು ನೀಡುವ ಸಂಬಂಧ ಮಧ್ಯವರ್ತಿಗಳ ಹಾವಳಿಯಿಂದ ಸಾರ್ವಜನಿಕರಿಗೆ ಈ ಸೇವೆಗಳು ವಿಳಂಬವಾಗಿ ತಲುಪುತ್ತಿರುವ ಬಗ್ಗೆ ಸಾಕಷ್ಟು ದೂರುಗಳು ಕೇಳಿ ಬಂದಿರುತ್ತವೆ. ಈ ಸಮಸ್ಯೆಯನ್ನು ಪರಿಹರಿಸುವ ಉದ್ದೇಶದಿಂದ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರನ್ನು ಮೇಲುಸ್ತುವಾರಿ ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

ಪ್ರಯುಕ್ತ ಸಾರ್ವಜನಿಕರು ಮಧ್ಯವರ್ತಿಗಳನ್ನು >>3

## ಬೆಳಕಿನ ಹಾದಿ

# ಮ್ಯಾಜಿಕ್ ಮರ

■ ಆರ್.ಬಿ.ಗುರುಬಸವರಾಜ



ಉದ್ಯಾನವನದಲ್ಲಿ ಒಂದು ದೊಡ್ಡ ಮರವಿತ್ತು. ಆ ಮರಕ್ಕೆ 'ನಾನು ಮ್ಯಾಜಿಕ್ ಮರ. ಮಾಂತ್ರಿಕ ಪದಗಳಿಂದ ನನ್ನನ್ನು ಕರೆದರೆ ನಾನು ಬಾಗಿಲು ತೆರೆಯುತ್ತೇನೆ' ಎಂಬ ಬೋರ್ಡ್ ನೇತುಹಾಕಲಾಗಿತ್ತು. ನಿತ್ಯವೂ ಅನೇಕರು ಉದ್ಯಾವನದಲ್ಲಿ ಆ ಬೋರ್ಡ್ ನೋಡಿ ಮುಂದೆ ಹೋಗುತ್ತಿದ್ದರು. ಅದರಲ್ಲಿ ಯುವಕರೂ ಇದ್ದರು. ಒಂದು ದಿನ ಒಬ್ಬ ನಿರುದ್ಯೋಗಿ ಯುವಕ ಆ ಉದ್ಯಾವನಕ್ಕೆ ಬಂದ. ಆ ಮರದ ಬೋರ್ಡ್ ಅವನನ್ನು ಆಕರ್ಷಿಸಿತು. ಅವನಿಗೆ ವಿಚಿತ್ರ ಎನಿಸಿತು. ಏನಾದರೂ ಆಗಲಿ ಒಂದು ಸಲ ಪ್ರಯತ್ನಿಸಬೇಕು ಎಂದು ನಿರ್ಧರಿಸಿದ.

ಬಾಗಿಲು ತೆರೆಯುವ ಮ್ಯಾಜಿಕ್ ಪದಗಳನ್ನು ಯುವಕ ಊಹಿಸತೊಡಗಿದ. 'ಅಬ್ರಕದಬ್ರ ಮರದಲ್ಲೊಬ್ರ', 'ಟಾಂಟಕೀರ ಟಿಂಗರ ಬುಡ್ಡಣ್ಣ', 'ಬಾಗಲು ತೆರೆಯೇ ಮರದಮ್ಮ' ಹೀಗೆ ಅನೇಕ ಪದಗಳನ್ನು ಹೇಳಿದ. ಅವುಗಳಲ್ಲಿ ಯಾವುದೂ ಕೆಲಸ ಮಾಡಲಿಲ್ಲ. ಇನ್ನಷ್ಟು ಪದಗಳನ್ನು ಹೇಳಿದ. ಮರದಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಬೇಸತ್ತ ಯುವಕ ಮರದ ನೆರಳಿನಲ್ಲಿ ಕುಳಿತ.

ಕುಳಿತಾಗಲೂ ಆ ಬೋರ್ಡ್ ಬಗ್ಗೆ ಯೋಚಿಸತೊಡಗಿದ. ಯಾರೋ ಸುಮ್ಮನೆ ತಮಾಷೆಗೆ ಈ ಬೋರ್ಡ್ ಹಾಕಿರಬೇಕು ಎಂದುಕೊಂಡ. ಆದರೆ ಅವನ ಒಳಮನಸ್ಸು ಇನ್ನೊಮ್ಮೆ ಪ್ರಯತ್ನಿಸು ಎಂದಿತು. ಆಗ ಯುವಕ 'ಪ್ರಿಯ ಮರವೇ ದಯವಿಟ್ಟು ಬಾಗಿಲು ತೆರೆ' ಎಂದನು. ಆಶ್ಚರ್ಯ! ಕೂಡಲೇ ಮರದ ಕಾಂಡದಲ್ಲಿ ಬಾಗಿಲು ತೆರೆಯಿತು. ಅದರ ಒಳಗೆ 'ನಿಮ್ಮ ಮಾಂತ್ರಿಕ ಪದಗಳನ್ನು ಮುಂದುವರೆಸಿ' ಎಂಬ ಮತ್ತೊಂದು ಬೋರ್ಡ್ ಕಾಣಿಸಿತೇ ವಿನಹ ಒಳಗೆಲ್ಲ ಕತ್ತಲು. ಯುವಕನಿಗೆ ಒಂದೆಡೆ ಖುಷಿ, ಮತ್ತೊಂದೆಡೆ ಬೇಸರ. ಮರದ ಬಾಗಿಲು ತೆರೆದಿದ್ದಕ್ಕೆ ಖುಷಿಯಾದರೆ, ಮತ್ತಷ್ಟು ಮಾಂತ್ರಿಕ ಪದಗಳನ್ನು ಹುಡುಕಬೇಕಲ್ಲ ಎಂದು ಬೇಸರವಾಯಿತು.

ಆಗ ಯುವಕ 'ಪ್ರಿಯ ಮರವೇ ಬಾಗಲು ತೆರೆದಿದ್ದಕ್ಕೆ ಧನ್ಯವಾದಗಳು!' ಎಂದನು. ಈ ಮಾತಿನಿಂದ ಮರದ ಒಳಭಾಗವು ಪ್ರಕಾಶಮಾನವಾಗಿ ಬೆಳಗಿತು. ಯುವಕ ಒಳಗೆ ಅಡಿಯಿಟ್ಟ. ಒಳಗೆ ದೊಡ್ಡದೊಂದು ಲೋಕವೇ ಅವನಿಗೆ ಕಾಣಿಸಿತು. ನೂರಾರು ಕಂಪನಿಗಳ ಸಿಇಓಗಳು ಅಲ್ಲಿದ್ದರು. ಇವನು ಒಳಗೆ ಹೋದ ಕೂಡಲೇ ಎಲ್ಲರೂ ತಮ್ಮತ್ತ ಕರೆದರು. ಅವನು ಒಂದೊಂದೇ ಟೇಬಲ್ಲಿನ ಬಳಿ ಹೋಗಿ ನಿಂತಾಗ ಅವರು ಕೆಲವೊಂದು ಪ್ರಶ್ನೆಗಳನ್ನು ಕೇಳುತ್ತಿದ್ದರು. ಕೇಳಿದ ಎಲ್ಲಾ ಪ್ರಶ್ನೆಗಳಿಗೆ ಜಾಣತನದಿಂದ ಉತ್ತರಿಸುತ್ತಿದ್ದ. ಹೀಗಾಗಿ ಅವನಿಗೆ ಬಹುತೇಕ ಕಂಪನಿಗಳು ಕೆಲಸದ ಆಫರ್ ನೀಡಿದವು. ಅದರಲ್ಲಿ ತನಗೆ ಇಷ್ಟವಾದ ಕಂಪನಿಯನ್ನು ಆರಿಸಿಕೊಂಡು ಕೆಲಸಕ್ಕೆ ಸೇರಿ ಸುಖವಾಗಿದ್ದ.

ಇಲ್ಲಿ ಯುವಕನ ಒಳಪ್ರವೇಶಕ್ಕೆ ಅವಕಾಶ ನೀಡಿದ್ದು ಅವನ ಮಾಂತ್ರಿಕ ಪದಗಳು. ಎಷ್ಟೋ ವೇಳೆ ನಾವು ಬಳಸುವ ಅಹಿತಕರ ಪದಗಳಿಂದ ನಮಗೆ ಒದಗಿ ಬಂದ ಅವಕಾಶಗಳನ್ನು ಕಳೆದುಕೊಳ್ಳುತ್ತೇವೆ. ಇತರರೊಂದಿಗೆ ಅಂದರೆ ಅಪರಿಚಿತರೊಂದಿಗೆ ಮಾತನಾಡುವಾಗ ನಮ್ಮ ಭಾಷೆ ಸೌಮ್ಯವಾಗಿದ್ದರೆ ಅಥವಾ ಪ್ರೀತಿಪೂರ್ವಕ ಮಾತುಗಳಿಂದ ಕೂಡಿದ್ದರೆ ಎಂತಹ ಅವಕಾಶಗಳೂ ಸಹ ನಮ್ಮ ಕಾಲಡಿಯಲ್ಲಿರುತ್ತವೆ. ಇದಕ್ಕೆ ಒಂದಿಷ್ಟು ಪ್ರಯತ್ನ ಬೇಕು ಅಲ್ಲವೇ? ಅವಕಾಶ ಎಂಬುದು ಚಹಾದಲ್ಲಿ ಅದ್ದಿದ ಬಿಸ್ಕಿಟ್‌ನಂತೆ. ತಕ್ಷಣವೇ ಅದನ್ನು ಬಾಯಲ್ಲಿರಿಸಿ ಆಸ್ವಾದಿಸಬೇಕು. ಇಲ್ಲದಿದ್ದರೆ ಅದು ನೆಲದ ಪಾಲು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ. **ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 9448633038

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಬಸವಣ್ಣ ಹೆಣ್ಣಾಗುವ ಪರಿ



ಭಾರತದ ಭಕ್ತಿ/ಅನುಭಾವ ಸಾಹಿತ್ಯದಲ್ಲಿ ವಿರಹ-ಮಿಲನದ ಶೃಂಗಾರಗಳಲ್ಲಿ ಅಳಲು ತೋಡಿಕೊಳ್ಳುವ ರೂಪಕಗಳು ಸಾಮಾನ್ಯ. ಅಕ್ಕ-ಮೀರಾ-ಆಂಡಾಳ್ ಇದಕ್ಕ ಖ್ಯಾತರು. ವಿಶೇಷವೆಂದರೆ, ಪುರುಷ ಭಕ್ತಕವಿಗಳು ತಮ್ಮನ್ನು ಹೆಣ್ಣಾಗಿ ರೂಪಾಂತರಗೊಳಿಸಿಕೊಂಡು ಹಾಡು ಕಟ್ಟುವುದು. ಕನ್ನಡ ವಚನಸಾಹಿತ್ಯದಲ್ಲಿ ಲಿಂಗಪತಿ ಶರಣಸತಿ ಪರಿಕಲ್ಪನೆ ಇದ್ದುದರಿಂದ ಪುರುಷ ವಚನಕಾರರೂ ಸಹ ರತಿರೂಪಕಗಳಲ್ಲಿ ವಚನ ಬರೆಯಲು ಸಾಧ್ಯವಾಯಿತು. ಈ ದಿಸೆಯಲ್ಲಿ ಅತ್ಯಂತ ಕೋಮಲವಾದ ಭಾವಗಳನ್ನು ಸೃಷ್ಟಿಸಿದವನು ಗಜೇಶ ಮಸಣಯ್ಯ. 'ಒಲಿದವರ ಕೊಲುವಡೆ ಮಸೆದ ಕೂರಲಗೇಕವ್ವಾ, ಒಲ್ಲೆನೆಂದರೆ ಸಾಲದೇ?' ಮುಂತಾದ ನವಿರು ರೂಪಕಗಳು ಅವನಲ್ಲಿವೆ. ಬಸವಣ್ಣನವರ 'ಅರಿಸಿಣವನೆ ಮಿಂದು' ವಚನ ಕೂಡ ಇಂತಹುದೇ. ಇಲ್ಲಿ ಬಸವಣ್ಣನವರ ವಿರಹಭಾವದ ಇನ್ನೊಂದು ವಚನವನ್ನು ಗಮನಿಸಬಹುದು:

**ಗಿಳಿಯ ಹಂಜರವಿಕ್ಕಿ ಸೊಡರಿಂಗೆಣ್ಣೆಯನೆರೆದು**
**ಬರವ ಹಾರುತ್ತಿದ್ದೆನೆಲೆಗವ್ವಾ**
**ತರಗೆಲೆ ಗಿರುಕೆಂದಡೆ ಹೊರಗನಾಲಿಸುವೆ**
**ಅಗಲಿದನೆಂದೆನ್ನ ಮನ ಧಿಗಿಲೆಂದಿತ್ತೆಲೆಗವ್ವಾ**
**ಕೂಡಲಸಂಗನ ಶರಣರು ಬಂದು**
**ಬಾಗಿಲ ಮುಂದೆ ನಿಂದು**
**ಶಿವಾ ಎಂದಡೆ ಸಂತೋಷಬಟ್ಟೆನೆಲೆಗವ್ವಾ**

ವಚನದ ಮೊದಲ ನಾಲ್ಕು ಚರಣಗಳು, ಪ್ರಿಯತಮೆ ಸಕಲ ತಯಾರಿ ಮಾಡಿಕೊಂಡು ಪ್ರಿಯಕರನನ್ನು ಕಾಯುವ ಭಾವದಿಂದ ಕೂಡಿವೆ. ಬರಲಿರುವ ನಲ್ಲನಿಗೆ ಸ್ವಾಗತಿಸಲು ಗಿಳಿಗೆ ಸೂಚನೆಕೊಟ್ಟು ಅದನ್ನು ಹಂಜರದಲ್ಲಿಡಲಾಗಿದೆ; ಉರಿವ ದೀಪಕ್ಕೆ ಆರದಂತೆ ಎಣ್ಣೆಯನ್ನು ಎರೆದು ಸಿದ್ಧಗೊಳಿಸಿದೆ. ನಲ್ಲನು ಎಂದು ಬಂದಾನೆಂದು ಕಾಯುವಿಕೆ ಅದೆಷ್ಟು ಕಾತರದಿಂದ ಕೂಡಿದೆಯೆಂದರೆ, ಮನೆಯ ಹೊರಗೆ ಗಾಳಿಗೆ ತರಗೆಲೆ ಅಲ್ಲಾಡಿದರೂ 'ಹೋ ಬಂದ' ಎಂದು ಮೈಯೆಲ್ಲ ಕಿವಿಯಾಗಿ ಹೊರಗಿನ ಶಬ್ದವನ್ನು ಆಲಿಸಲಾಗುತ್ತಿದೆ. ('ತರಗೆಲೆ' 'ಗಿರುಕು' ಶಬ್ದದಲ್ಲಿರುವ 'ರ'ಕಾರದ ಅನುಪ್ರಾಸವು ನೀರವತೆ ಒಡೆದು ಸಪ್ಪಳ ಸೃಷ್ಟಿಸುತ್ತಿರುವ ಭಾಷಿಕ ಪರಿ ಅಪೂರ್ವ.) ಆದರೂ ನಲ್ಲನ ಸುಳಿವಿಲ್ಲ. ಆತ ಬಾರದೆ ತನ್ನಿಂದ ತಪ್ಪಿಸಿಕೊಂಡನೇನೊ ಎಂಬ ಶಂಕೆ ಮೊಳೆಯುತ್ತಿದೆ. ಕವಿ ಮನೆಯೊಳಗಿನ ಮತ್ತು ಮನದೊಳಗಿನ ಈ ಸಿದ್ಧತೆ, ಕಾಯುವಿಕೆ, ಶಂಕೆ, ಹರುಷಗಳೆಲ್ಲವನ್ನು ಹಂಚಿಕೊಳ್ಳುತ್ತಿರುವುದು ಆಪ್ತಸಖಿಯೊಬ್ಬಳ ಜತೆ. ಈ ಸಖಿಯನ್ನು 'ಎಲೆಗವ್ವಾ' ಎಂದು ಮೂರು ಸಲ ಸಂಬೋಧಿಸಲಾಗಿದೆ. ಅಕ್ಕ ಕೂಡ ತನ್ನ ಸವಿಗನಸುಗಳನ್ನು ('ಅಕ್ಕಅಕ್ಕ ಕೇಳವ್ವಾ') ಆಪ್ತ ಸಖಿಯ ಜತೆ ಹೇಳಿಕೊಳ್ಳುವುದುಂಟು.

ವಚನದ ಮೊದಲ ಭಾಗವು ಭಕ್ತಿಪಂಥದ ಅಪ್ಪಟ ವಿರಹಕಾವ್ಯ. ಇಂತಹ ವಿರಹ ಕಾವ್ಯದ ಚೀಸುಗಳು ಹಿಂದೂಸ್ತಾನಿ ಸಂಗೀತದಲ್ಲಿ ವಿಪುಲವಾಗಿವೆ. ಉಸ್ತಾದ್ ಬಡೇಗುಲಾಂ ಅಲಿಖಾನ್ ಹಾಡಿರುವ 'ಕಾ ಕರೂ ಸಜನೀ ಆವೇ ನ ಬಾಲಮ್' ಠುಮ್ರಿಯು, ಈ ವಚನದ ಭಾವವನ್ನೇ ನೆನಪಿಸುತ್ತದೆ. ಆದರೆ ಹೆಣ್ಣಾಗಿರುವ ಭಕ್ತನ ಕಾಯುವಿಕೆ ವ್ಯರ್ಥವಾಗುವುದಿಲ್ಲ. ಕಾದಿದ್ದು ಒಬ್ಬನಿಗೆ ('ಅಗಲಿದನ್' ಏಕವಚನ ಗಮನಿಸಬೇಕು); ಆದರೆ ಆಗಮಿಸಿದ್ದು ಹಲವರು- 'ಕೂಡಲಸಂಗನ ಶರಣರು'. ತರಗೆಲೆ ಗಿರುಕೆಂದರೂ ಹೊರಗನಾಲಿಸುತ್ತಿದ್ದ ಜೀವಕ್ಕೆ, ಬಂದವರು 'ಶಿವಾ' ಎಂದು ತಾವೇ ಸಪ್ಪಳ ಮಾಡುತ್ತ ತಮ್ಮ ಬರವನ್ನು ಸಾರುತ್ತಿದ್ದಾರೆ- ಅದೂ ಬಾಗಿಲ ಮುಂದೆ ನಿಂದು. ಆಗ ಕಾಯುತ್ತಿದ್ದ ಜೀವಕ್ಕೆ ಉಂಟಾದ ಪರಿಣಾಮವನ್ನು ವಚನವು ಒಂದೇ ಶಬ್ದದಲ್ಲಿ ಪ್ರಕಟಿಸುತ್ತಿದೆ: "ಸಂತೋಷ ಬಟ್ಟೆನೆಲೆಗವ್ವಾ." ಸಂತೋಷ-ಪಟ್ಟೆ ಸಂಧಿ ಗೊಂಡು ಸಂತೋಷ ಬಟ್ಟೆಯಾಗಿದೆ. ಅದು ಸಂತೋಷದ ಬಟ್ಟೆ (ದಾರಿ) ಕೂಡ. ಕಾವ್ಯಮೀಮಾಂಸೆಯ ಪರಿಭಾಷೆಯಲ್ಲಿ ಹೇಳುವುದಾದರೆ, ವಚನದ ಭಾವವು ವಿಪ್ರಲಂಭ ಶೃಂಗಾರದಿಂದ ಆರಂಭಗೊಂಡು ಭೋಗ ಶೃಂಗಾರದೊಂದಿಗೆ ಮುಗಿಯುತ್ತಿದೆ. ಇದಕ್ಕೆ ಪೂರಕವಾಗಿ ವಚನದಲ್ಲಿ 'ಕೂಡಲಸಂಗಮ' ಅಂಕಿತವು ಪೂರಕವಾಗಿದೆ. ಆದರೆ ಈ ಸಂಗಮವು ಕೇವಲ ಲೈಂಗಿಕವಲ್ಲ. ಶೃಂಗಾರ ಪರಿಭಾಷೆಯಲ್ಲಿರುವ ಆಧ್ಯಾತ್ಮಿಕ ಎಂಬುದನ್ನು 'ಶಿವಾ' 'ಕೂಡಲಸಂಗ' 'ಶರಣರು' ಎಂಬ ಶಬ್ದಗಳು ಸೂಚಿಸುತ್ತಿವೆ. ಇಲ್ಲಿ ಭಕ್ತನ ಹೆಣ್ತನ, ವಿರಹ -ಮಿಲನಗಳು ಭಕ್ತಿಪಂಥಕ್ಕೆ ಸಹಜವಾದ ರಸತತ್ವದ ಭಾಗಗಳು. ಭಕ್ತಿಯ ರಸಮಾರ್ಗದ ಬಗ್ಗೆ ಶಂಕೆಯಿದ್ದ ವಿರಕ್ತ ಅಲ್ಲಮ ಎಂತಲೇ ಶೃಂಗಾರ ಜಗತ್ತಿನ ಉಪಮೆ ರೂಪಕಗಳನ್ನು ಬಳಸುವುದಿಲ್ಲ. ಈ ಕುರಿತು ಡಿ.ಆರ್. ತಮ್ಮ 'ಅಲ್ಲಮ ಪ್ರಭು ಮತ್ತು ಶೈವಪ್ರತಿಭೆ'ಯಲ್ಲಿ ಚೆನ್ನಾಗಿ ಕಾಣಿಸುತ್ತಾರೆ.



**ರಹಮತ್ ತರೀಕೆರೆ**
**ಲೇಖಕರು, ಸಂಸ್ಕೃತಿ ಚಿಂತಕರು**

Hampi Times E-paper
SCAN AND READ

ಅಕ್ಕ ತನ್ನ "ಸಂಗದಿಂದಲ್ಲದೆ ಅಗ್ನಿಹುಟ್ಟದು" ವಚನದಲ್ಲಿ ಚೆನ್ನಮಲ್ಲಿಕಾರ್ಜುನನ "ಶರಣರ ಅನುಭಾವ ಸಂಗದಿಂದ ಪರಮಸುಖಿಯಾಗಿ ಬದುಕಿದೆನಯ್ಯಾ" ಎಂದು ಹೇಳುವುದುಂಟು; ಇದು ಕೂಡಲಸಂಗನ ಶರಣರ ಬರವಿನಿಂದ ಸಂತೋಷಬಟ್ಟೆ ಎಂದು ಬಸವಣ್ಣ ಹೇಳುವುದಕ್ಕೆ ಸಮೀಪವಾದುದು.

ಆದರೂ ಅಕ್ಕನಲ್ಲಿ ಶೃಂಗಾರವು ಬಸವಣ್ಣನವರಲ್ಲಿ ಬರುವಷ್ಟು ಖಚಿತತೆಯಲ್ಲಿ ದೈವಭಕ್ತಿಯ ಭಾಗವಾಗಿ ಹೊರಳಿಕೊಳ್ಳುವುದಿಲ್ಲ. ಅದು ಗಂಡುಹೆಣ್ಣಿನ ನೆಲೆಯಲ್ಲಿಯೇ ಹೆಚ್ಚು ವಿಹರಿಸುತ್ತದೆ. ಅಕ್ಕನ ವಚನಗಳಲ್ಲಿ ನಲ್ಲನ ಹುಡುಕಾಟ-ಮದುವೆ-ಕೂಡುವ ಸುಖದ ರೂಪಕಗಳ ಜಗತ್ತಿನ ಶೃಂಗಾರವು ಕುಟುಂಬದ ಚೌಕಟ್ಟಿನಿಂದ ಹೊರಗಿರಲು ಹವಣಿಸುತ್ತದೆ; ಸುಲಿಪಲ್ಲ ಗೊರವನ ಬೆನ್ನಹಿಂದೆ ಹೋಗುವ ಉನ್ಮತ್ತ ಪ್ರೇಮಿಯ ನೆಲೆ ಅದು; ಉತ್ತರ ಭಾರತದ ಭಕ್ತಿಪಂಥದ ಕೃಷ್ಣಕೇಂದ್ರಿತ ಕಥನಗಳಲ್ಲಿರುವ ಶೃಂಗಾರದಲ್ಲಿಯೂ ಗಂಡುಳ್ಳ ಹೆಂಡತಿ ದೈವಿಕ ನಲ್ಲನ ಜತೆ ಸಂಬಂಧ ಹೊಂದುವುದು ದೋಷವಲ್ಲ. ರಾಧೆ ಮತ್ತು ಕೃಷ್ಣನ ಮಿಲನದ ರೂಪಕಗಳು ಇಂತಹವು. ಬಂಗಾಳದ ಬಾವುಲ್ ಸಂಪ್ರದಾಯದಲ್ಲಿ ಈಗಲೂ ಒಬ್ಬ ಗಂಡು ರಾಧೆಯಾಗಿ ಇನ್ನೊಬ್ಬ ಕೃಷ್ಣನಾಗಿ ಹಾಡುತ್ತ ಪರಸ್ಪರ ಮಿಲನಗೊಳ್ಳುವಂತೆ ಉತ್ಕಟವಾಗಿ ಕುಣಿಯುತ್ತ, ಶೃಂಗಾರ ಭರಿತ ಹಾಡುಗಳನ್ನು ಹಾಡುವರು. ಉತ್ತರ ಭಾರತದ ರಸವಾದಿ ಭಕ್ತಿಪಂಥಕ್ಕೇ ವಿಶಿಷ್ಟವಾದ ಶೃಂಗಾರ. ಬಂಗಾಳದ ಭಕ್ತಿಕವಿ ವಿದ್ಯಾಪತಿಯ ಹಾಡುಗಳು ಇದಕ್ಕೆ ಅತ್ಯುನ್ನತ ನಿದರ್ಶನಗಳು.

ಆದರೆ ಶೃಂಗಾರ ಮತ್ತು ವಿರಕ್ತ ಎರಡೂ ನೆಲೆಯುಳ್ಳ ಕನ್ನಡ ವಚನಕಾರರ ವಚನಗಳಲ್ಲಿ ಬರುವ ಗಂಡುಹೆಣ್ಣಿನ ಸಂಬಂಧಗಳು, ಕುಟುಂಬದ ಹೊರಗಿನ ನಲ್ಲ-ನಲ್ಲೆಯರ ಮುಕ್ತ ನೆಲೆಗಿಂತ ಹೆಚ್ಚಾಗಿ, ಕುಟುಂಬದ ಸತಿಪತಿಯರ ನಿರ್ಬಂಧಿತ ನೆಲೆಯತ್ತಲೇ ಚಲಿಸುತ್ತವೆ. ಅಲ್ಲಿ ಪತಿಗೆ ಸತಿಯ ನಿಷ್ಠೆಯನ್ನು ಸಾಬೀತುಪಡಿಸುವ ರೂಪಕಗಳಿವೆ. 'ಕಳ್ಳಹಾದರಕ್ಕೆ ಹೋದೊಡೆ' ವಚನ ಇದಕ್ಕೆ ಸಾಕ್ಷಿ. ಕಾರಣ, ಹೆಚ್ಚಿನ ಶರಣರು ಗಂಡ-ಗಂಡುಪ್ರಧಾನವಾದ ಕುಟುಂಬ ಸಂಸ್ಥೆಯನ್ನು ಮಾನ್ಯ ಮಾಡಿದ್ದುದು. ಹೀಗಾಗಿ ರತಿಜಗತ್ತಿನ ಶೃಂಗಾರ ರೂಪಕಗಳ ವಿಷಯದಲ್ಲಿ ವಚನಗಳಲ್ಲಿ ಮೂರು ತಾತ್ವಿಕ ಧಾರೆಗಳಿದ್ದು, ಅವನ್ನು ಅಕ್ಕ-ಅಲ್ಲಮ-ಬಸವ ಪ್ರತಿನಿಧಿಸುತ್ತಾರೆ ಎನ್ನಬಹುದು.

ಗಂಡು ತನ್ನನ್ನು ಹೆಣ್ಣಾಗಿಸಿಕೊಂಡು ಗಂಡು ದೈವವನ್ನು ಹುಡುಕುವ ಕೂಡುವ ಈ ಭಕ್ತಿಪಂಥದ ರೂಪಾಂತರ ಅಥವಾ ಪರಕಾಯ ಪ್ರವೇಶವು, ಶಾಕ್ತ ಪರಂಪರೆಯಲ್ಲಿ ಬೇರೊಂದು ಬಗೆಯಲ್ಲಿದೆ. ಅಲ್ಲಿ ಗಂಡು ಹೆಣ್ಣಾಗುವುದು ಪುರುಷವಾದಕ್ಕೆ ಸೆಡ್ಡುಹೊಡೆದ ಸ್ತ್ರೀದೇವತಾವಾದಿಯ ಹುರುಡಿನ ಭಾಗವಾಗಿ ಸಿಕ್ಕ ಗೆಲುವಿನ ಸಂಕೇತ. ಅಲ್ಲಿ ಗಂಡು ತಾನೇ ಬಯಸಿ ಹೆಣ್ಣಾಗುವುದಿಲ್ಲ. ದೇವಿ ಅವರ ಗಂಡುಸೊಕ್ಕನ್ನು ಮುರಿದು ಹೆಣ್ಣಾಗಿಸಿ ವಿಜೃಂಭಿಸುತ್ತಾಳೆ. ಇದು ಇನ್ನೊಂದೇ ಲೋಕ.

ಬಸವಣ್ಣನವರ ವಿಶೇಷತೆಯೆಂದರೆ, ತನ್ನನ್ನು ಹೆಣ್ಣಾಗಿಸಿಕೊಂಡು ರತಿಭಾಷೆಯಲ್ಲಿ ವರ್ಣಿಸಿಕೊಳ್ಳುತ್ತ ಶಿವಾ ಎಂದು ಹೇಳಿಕೊಂಡು ಬರುವ ಕೂಡಲಸಂಗನ ಶರಣರನ್ನು ಕಾಯುವ, ಕೂಡುವ, ಸಂತೋಷಬಡುವ ಕೋಮಲಭಾವ ಪ್ರಕಟಿಸುವುದು; ಅಷ್ಟೆ ತೀವ್ರವಾಗಿ ಸೈದ್ಧಾಂತಿಕ ಎದುರಾಳಿಗಳನ್ನು ರಣ ಪರಿಭಾಷೆಯಲ್ಲಿ ಮುಖಾಮುಖಿ ಮಾಡುವುದು; ಹೆಣ್ತನ ಗೈರುಹಾಜರಿಯಾಗುವ ಪೌರುಷ ಭಾವದಲ್ಲಿ ನಿಷ್ಠುರವಾದ ಸಂಘರ್ಷ ಭಾವ ಪ್ರಕಟಿಸುವುದು. ('ವೇದಕ್ಕೆ ಒರೆಯ ಕಟ್ಟುವೆ' ವಚನ ಇದಕ್ಕೆ ಸಾಕ್ಷಿ.) ಹೀಗೆ ರತಿಯ-ವಿರತಿಯ, ಹೆಣ್ತನದ-ಪೌರುಷದ ಎರಡೂ ದೇಹ ಮತ್ತು ಭಾವ ಜಗತ್ತಿನಲ್ಲಿ ರೂಪಾಂತರಗೊಳ್ಳಬಲ್ಲ ಕುಶಲತೆ ಬಸವಣ್ಣನವರ ವಿಶೇಷತೆ. ಅವರು ಭಕ್ತ, ರಾಜಕಾರಣಿ, ಸಮಾಜಸುಧಾರಕ ಮುಂತಾದ ಬಹು ಅಯಾಮವುಳ್ಳ ವ್ಯಕ್ತಿತ್ವ ಪಡೆದುಕೊಳ್ಳಲು ಸಾಧ್ಯವಾಗಿದ್ದು ಈ ಚಲನಶೀಲ ರೂಪಾಂತರ ಪ್ರಜ್ಞೆಯಿಂದಲೇ ಇರಬೇಕು.

# ಉತ್ತಮ ಮಳೆ, ಬಸ್ ನಿಲ್ದಾಣಕ್ಕೆ ನುಗ್ಗಿದ ಚರಂಡಿ ನೀರು

## ಬಸ್ ಏರಲು ಪ್ರಯಾಣಿಕರ ಹರಸಾಹಸ | ಜಿಲ್ಲಾಧಿಕಾರಿಯತ್ತ ಜನರ ಚಿತ್ತ

■ ಹಂಪಿ ಟೈಮ್ಸ್ ಕೊಟ್ಟೂರು

ಕೊಟ್ಟೂರು ಪಟ್ಟಣದಲ್ಲಿ ಬುಧವಾರ ಬಿರುಗಾಳಿ, ಸಿಡಿಲು ಆರ್ಭಟದ ನಡುವೆಯೂ ಉತ್ತಮ ಮಳೆ ಸುರಿದಿದ್ದು, ಕೆಲ ತಿಂಗಳಿಂದ ಬಿಸಿಲಿನ ತಾಪಕ್ಕೆ ಬೆಂದು ಬಸವಳಿದಿದ್ದ ಪಟ್ಟಣದ ಜನತೆಗೆ ತಂಪಾದ ಮಳೆಯಿಂದ ನಿಟ್ಟುಸಿರು ಬಿಟ್ಟಿರುವರು.

ಗಾಳಿಯ ಆರ್ಭಟ ಹೆಚ್ಚಾಗಿದ್ದಾರಿಂದ ತಾಲೂಕಿನ ಕೆ.ಅಯ್ಯನಹಳ್ಳಿ ಗ್ರಾಮದ ಎ ಎಂ ಸುರೇಶ, ಎಂ ಜಿ ಹಾಲೇಶ, ಬಿ ಎಂ ಕೊಟ್ರಯ್ಯ ಇವರುಗಳ ಮನೆಯ ಮೇಲ್ಛಾವಣಿಯ ತಗಡು ಹಾರಿಹೋಗಿ ಬಹಳ ನಷ್ಟ ಉಂಟಾಗಿದೆ. ಇದರ ಜೊತೆಗೆ ಇತ್ತೀಚಿಗೆ ನಿರ್ಮಿಸಿದ ಇಲ್ಲಿನ ಗ್ರಾಮದ ಹೋಟೇಲ್‌ನ ತಗಡು ಗಾಳಿಯ ರಭಸಕ್ಕೆ ಜಖಮ್ ಗೊಂಡಿವೆ.

ಪಟ್ಟಣದ ಕೆಲ ಬಡಾವಣೆಗಳಲ್ಲಿ ಗಾಳಿ ರಭಸಕ್ಕೆ



ಮರಗಳು ನೆಲಕ್ಕುರುಳಿದ್ದು ಯಾವುದೇ ಹಾನಿ ಉಂಟಾಗಿಲ್ಲ, ಜೆಸ್ಕಾಂ ಅಧಿಕಾರಿಗಳು ಜನರ ಹಿತದೃಷ್ಟಿ ಯಿಂದ ತಕ್ಷಣ ಪಟ್ಟಣದಲ್ಲಿ ವಿದ್ಯುತ್ ಸಂಪರ್ಕ ವನ್ನು ಸ್ಥಗಿತಗೊಳಿಸಿ ಉಂಟಾಗಬಹುದಾದ ಜೀವ ಹಾನಿಗಳನ್ನು ತಪ್ಪಿಸಿದ್ದಾರೆ. ಅರ್ಧ ಗಂಟೆಗೂ ಹೆಚ್ಚು ಕಾಲ ಸುರಿದ ಮಳೆಯಿಂದ ಪಟ್ಟಣದ ಭಾಗಶಃ ಚರಂಡಿ ನೀರು ಸರ್ಕಾರಿ ಬಸ್ ನಿಲ್ದಾಣಕ್ಕೆ ನುಗ್ಗಿ, ಸಂಪೂರ್ಣ ನಿಲ್ದಾಣ ಜಲ ಆವೃತಗೊಂಡ ಹಿನ್ನೆಲೆ ಶಾಲಾ, ಕಾಲೇಜ್ ವಿದ್ಯಾರ್ಥಿಗಳು ಹಾಗೂ ಪ್ರಯಾಣಿಕರು ಅರಸಾಹಸ ಪಟ್ಟು ಬಸ್ ಹತ್ತುತ್ತಿರುವ ದೃಶ್ಯ ಗೋಚರಿಸಿತು.



ನಿಲ್ದಾಣ ಜಲ ಆವೃತ್ತ ಆಗಿರುವ ಕಾರಣ, ಕೆಲ ಬಸ್, ನಿಲ್ದಾಣದ ಹೊರಗೆ ನಿಂತು ಪ್ರಯಾಣಿಕರನ್ನು ಹತ್ತಿಸುತ್ತಿದ್ದರಿಂದ ನಿಲ್ದಾಣದ ಮುಂದಿನ ರಸ್ತೆ ಕೆಲ ಸಮಯದವರೆಗೆ ಟ್ರಾಫಿಕ್ ಜಾಮ್ ನಿರ್ಮಾಣ ಉಂಟಾಗಿತ್ತು, ಇದನ್ನು ಕ್ಲಿಯರ್ ಮಾಡಲು ಇಲ್ಲಿ ಸಂಬಂಧ ಪಟ್ಟ ಯಾವುದೇ ಅಧಿಕಾರಿಗಳು ಇಲ್ಲದಿದ್ದರಿಂದ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು. ಮಳೆ ಬಂದ ಪ್ರತಿ ಬಾರಿಯೂ ಪಟ್ಟಣದ ಚರಂಡಿ ನೀರಿನಿಂದ ಕೊಟ್ಟೂರು ಸರ್ಕಾರಿ ಬಸ್ ನಿಲ್ದಾಣ ಜಲಾವೃತ್ತ ಆಗುತ್ತಿದ್ದು ಜನ ಪ್ರತಿನಿಧಿಗಳಾಗಲಿ ಅಧಿಕಾರಿಗಳಾಗಲಿ ಈ ಬಗ್ಗೆ ಎಚ್ಚೆತ್ತುಕೊಳ್ಳದಿರುವುದಕ್ಕೆ ಪ್ರಯಾಣಿಕರು ಹಾಗೂ ಸ್ಥಳೀಯ ಸಾರ್ವಜನಿಕರು ಶಪಿಸಿದರು.

**ಮಳೆ ಬಂದ ಪ್ರತಿ ಬಾರಿಯೂ ಕೊಟ್ಟೂರು ಸರ್ಕಾರಿ ಬಸ್ ನಿಲ್ದಾಣ ಚರಂಡಿ ನೀರಿನಿಂದ ಆವೃತ್ತ ಆಗುತ್ತಲೇ ಇದೆ. ಆದರೆ ಈ ಬಗ್ಗೆ ಜನಪ್ರತಿನಿಧಿಗಳು, ಸ್ಥಳೀಯ ಅಧಿಕಾರಿಗಳು ಕ್ರಮಕ್ಕೆ ಮುಂದಾಗುತ್ತಿಲ್ಲ. ಜನಪರ ಕಾಳಜಿ ಹೊಂದಿರುವ ಜಿಲ್ಲಾಧಿಕಾರಿ ಎಂ.ಎಸ್ ದಿವಾಕರ್ ಅವರು ಶೀಘ್ರ ಇಲ್ಲಿನ ಅವ್ಯವಸ್ಥೆ ಬಗ್ಗೆ ಕಾಳಜಿ ವಹಿಸಿ, ಜನರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲಿ ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.**

**ಕವಿ ಮನಸು**

## ಗೊಂಚಲು ಮಿಡಿಗಳು



ಗೊಂಚಲು ಮಿಡಿಗಳು ಮಿಂಚುತಲಿರುವವು
ಹಂಚಲಿಕಿರುವರೆ ಮಾವುಮಿಡಿ
ಹೊಂಚನು ಹಾಕಲು ಸಂಚಿಯ ಜೊತೆಯಲಿ
ಮುಂಚೆಯೆ ಬಂದೆನು ದಾರಿಬಿಡಿ

ತುಪ್ಪದ ಅನ್ನಕೆ ಒಪ್ಪುವ ರುಚಿಯದು
ಉಪ್ಪಿನಕಾಯಿಯ ನಾ ಸವಿವೆ
ತಪ್ಪಿಸಿಕೊಳ್ಳಲು ಒಪ್ಪದ ಮನವಿದು
ಚಪ್ಪರಿಸುತ್ತಲೆ ನಾ ಬರುವೆ

ಎಲೆಗಳ ಎಣಿಕೆಯ ಎಳೆಮಿಡಿ ಮೀರಿಸಿ
ಬೆಳೆದಿವೆ ಮರದಲಿ ಸೊಗಸಾಗಿ
ಹುಳಿರುಚಿಯಾದರು ಬಲಿತರೆ ಸಿಹಿಯಿದೆ
ಬಳಸಲು ಯೋಗ್ಯವು ಹಿತವಾಗಿ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಚಿತ್ರಕ್ಕೊಂದು ಕವನ



ಚಂದಿರನ ಅಂದದ ಮಗು
ಪಡೆದ ನಾ ಅನಸೂಯಾ.

ತೊಟ್ಟಿಲು ಕಟ್ಟಿ ಜೋಗುಳವಾಡುತ
ಗಾಳಿಯಲ್ಲಿ ತೇಲಿ ಸೇರಿದೆ ಆಕಾಶಕಾಯ.

ಆ ಸ್ವರ್ಗವೇ ನನ್ನ ಮಡಿಲಲ್ಲಿ
ಸಗ್ಗದ ಸಿರಿಯ ಇಂದ್ರನೀಲ ನಾ ಇಲ್ಲಿ.

ಹರಿಯುವ ನದಿ, ಅರಳಿದ ಹೂವಿಗೆ
ಮನ ಸೋಲದಿರಲು ಸಾಧ್ಯವೇ?

ಮಲಗಿರುವ ಮಗುವಿನ ಕೆಂದುಟಿಯ
ಅಂದಕ್ಕೆ
ಅಮ್ಮನ ಮನ ಹಿಮದಂತೆ ಕರಗಿದೆ!'
ನಿನಗೆ ಕಾಣದೆ.

ಮುಗಿಯದಿರಲಿ ಈ ಇರುಳು
ನಿನ್ನ ಅಪ್ಪುಗೆ ಒಂದೇ ಬಯಸುವುದು ಹೆತ್ತ
ಕರುಳು.

– ಮಂಜುಶ್ರೀ ಮುರಳೀಧರ್




**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಜಾತ್ರೆಗೆ ಬರುವವರಿಗೆ ಅಗತ್ಯ ವ್ಯವಸ್ಥೆ ಕಲ್ಪಿಸಿ

## ಜಿಲ್ಲಾಧಿಕಾರಿ ನಲಿನ್ ಅತುಲ್ ಸೂಚನೆ ಶ್ರೀ ಹುಲಿಗೆಮ್ಮ ದೇವಿ ಜಾತ್ರಾ ಮಹೋತ್ಸವ–2024 ಪೂರ್ವಸಿದ್ಧತಾ ಸಭೆ

■ **ಹಂಪಿ ಟೈಮ್ಸ್ ಕೊಪ್ಪಳ**

ಮೇ 30 ರಿಂದ ಜೂನ್ 03 ರವರೆಗೆ ನಡೆಯಲಿರುವ ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದ ಜಾತ್ರಾ ಮಹೋತ್ಸವಕ್ಕೆ ಆಗಮಿಸುವ ಎಲ್ಲ ಸಾರ್ವಜನಿಕರಿಗೆ ಯಾವುದೇ ರೀತಿಯ ಅನನುಕೂಲವಾಗದಂತೆ ಅಗತ್ಯ ವ್ಯವಸ್ಥೆ ಕಲ್ಪಿಸಿ, ಸಕಲ ಸಿದ್ಧತೆಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಸೂಚನೆ ನೀಡಿದರು.

ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಕೊಪ್ಪಳ ತಾಲ್ಲೂಕಿನ ಹುಲಿಗಿಯ ಶ್ರೀ ಹುಲಿಗೆಮ್ಮ ದೇವಿ ಜಾತ್ರಾ ಮಹೋತ್ಸವ ನಿಮಿತ್ತ ಚರ್ಚಿಸಲು ಬುಧವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಾತ್ರಾ ಸಮಯದಲ್ಲಿ ಲಕ್ಷಗಟ್ಟಲೆ ಜನರು ಸೇರುವುದರಿಂದ ಶುದ್ಧ ಕುಡಿಯುವ ನೀರು ಒದಗಿಸಲು ಹಾಗೂ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿ. ಇದಕ್ಕಾಗಿ ಹೆಚ್ಚುವರಿ ನೀರಿನ ಟ್ಯಾಂಕರ್‌ಗಳು, ಶುದ್ಧ ಕುಡಿಯುವ ನೀರಿನ ಘಟಕಗಳು, ನೀರಿನ ಅರವಟಿಗೆಗಳನ್ನು ವ್ಯವಸ್ಥೆ ಮಾಡಬೇಕು. ದೇವಸ್ಥಾನ ಹಾಗೂ ದೇವಸ್ಥಾನದ ಸುತ್ತಲಿನ ಪ್ರದೇಶದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಅನೈರ್ಮಲ್ಯದಿಂದ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಇರುವುದರಿಂದ ನೈರ್ಮಲ್ಯಯುತ ವಾತಾವರಣ ಕಲ್ಪಿಸಲು ಕ್ರಮ ವಹಿಸಬೇಕು. ಹುಲಿಗಿ ಗ್ರಾಮದ ರಸ್ತೆ ಸೇರಿದಂತೆ ಪ್ರಮುಖ ಸ್ಥಳಗಳ ಸ್ವಚ್ಛತೆಗೂ ಸಹ ಗ್ರಾ.ಪಂ.ನಿಂದ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.



ಜಾತ್ರೆಗೆ ಆಗಮಿಸಲಿರುವ ಭಕ್ತಾಧಿಗಳಿಗೆ ಸಮರ್ಪಕವಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಈ ನಿಟ್ಟಿನಲ್ಲಿ ದೇವಸ್ಥಾನದಲ್ಲಿ ಟ್ಯಾಂಕರ್‌ಗಳ ಜೊತೆಗೆ ಬಾಡಿಗೆ ರೂಪದಲ್ಲಿ ಟ್ಯಾಂಕರ್‌ಗಳನ್ನು ಪಡೆದು ಜನರಿಗೆ ಯಾವುದೇ ರೀತಿಯ ಕುಡಿಯುವ ನೀರಿನ ಸಮಸ್ಯೆಯಾಗದಂತೆ ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಹುಲಿಗಿ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು ಎಂದರು.

ಜಾತ್ರಾ ಸಮಯದಲ್ಲಿ ನಿರಂತರ ವಿದ್ಯುತ್ ಸರಬರಾಜು ಮಾಡಲು ಕ್ರಮ ವಹಿಸಬೇಕು. ಈ ಬಗ್ಗೆ ನಿಗಾ ವಹಿಸಲು ಅನುಕೂಲವಾಗುವಂತೆ ಒಂದು ವಿಶೇಷ ತಂಡ ರಚಿಸಬೇಕು. 2 ರಿಂದ 3 ಟಿಸಿಗಳನ್ನು ಕಾಯ್ದಿರಿಸಿಕೊಳ್ಳಬೇಕು. ನೀರಿನ ಸರಬರಾಜಿಗೆ ಹಾಗೂ ಬೆಳಕಿನ ವ್ಯವಸ್ಥೆಗೆ ಅಡಚಣೆಯಾಗದಂತೆ ನಿರಂತರ ವಿದ್ಯುತ್ ಸರಬರಾಜು ಮಾಡಬೇಕು ಹಾಗೂ ರಾತ್ರಿ ಸಮಯದಲ್ಲಿ ವಿದ್ಯುತ್ ಸ್ಥಗಿತಗೊಳ್ಳದಂತೆ ಜೆಸ್ಕಾಂ ಮತ್ತು ದೇವಸ್ಥಾನದ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಹೇಳಿದರು.

ಜಾತ್ರೆಗೆ ಆಗಮಿಸಲಿರುವ ಭಕ್ತಾದಿಗಳ ಆರೋಗ್ಯದ ಹಿತದೃಷ್ಠಿಯಿಂದ ಜಾತ್ರೆ ಸಮಯದಲ್ಲಿ ಔಷಧಿಗಳೊಂದಿಗೆ ಎರಡು ತಾತ್ಕಾಲಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದಲ್ಲದೇ ಎರಡು ಆಂಬುಲೆನ್ಸ್ ಕಾಯ್ದಿರಿಸಲು ಆರೋಗ್ಯ ಇಲಾಖೆ ಅಧಿಕಾರಿಗಳು ಮತ್ತು ಹುಲಿಗಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಭಕ್ತಾದಿಗಳ ವಾಹನಗಳ ನಿಲುಗಡೆಗಾಗಿ ದ್ವಿಚಕ್ರ, ನಾಲ್ಕು ಚಕ್ರ ಹಾಗೂ ಭಾರಿ ವಾಹನಗಳ ನಿಲುಗಡೆಗಾಗಿ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆಗಾಗಿ ಪೊಲೀಸ್ ಅಧಿಕಾರಿಗಳೊಂದಿಗೆ ಕೂಡಿ ದೇವಸ್ಥಾನದ ಅಧಿಕಾರಿಗಳು ಅಗತ್ಯ ಕ್ರಮ ವಹಿಸಬೇಕು ಎಂದು ಅವರು ಹೇಳಿದರು.

ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ ಚುನಾವಣಾ ಕರ್ತವ್ಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರು ತೆರಳಿದ್ದು, ಲಭ್ಯವಿರುವ ಪೊಲೀಸ್ ಸಿಬ್ಬಂದಿಗಳೊಂದಿಗೆ ಗೃಹರಕ್ಷ ದಳದವರನ್ನು ನೇಮಿಸಿ ಜಾತ್ರೆಗೆ ಅಗತ್ಯ ಭದ್ರತೆ ಒದಗಿಸಲು ಕ್ರಮ ಕೈಗೊಳ್ಳಬೇಕು. ಜಾತ್ರಾ ಸಮಯದಲ್ಲಿ ತುಂಗಭದ್ರಾ ಜಲಾಶಯದಿಂದ ನದಿಗೆ ನೀರು ಬಿಡುವಂತೆ ತುಂಗಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಜಾತ್ರೆಗೆ ವಿವಿಧೆಡೆಯಿಂದ ಭಕ್ತಾದಿಗಳು ಆಗಮಿಸಲಿದ್ದು, ಕೆ.ಎಸ್.ಆರ್.ಟಿ.ಸಿ ಯವರು ಹೆಚ್ಚಿನ ಸಂಖ್ಯೆಯ ಬಸ್ ವ್ಯವಸ್ಥೆ ಕಲ್ಪಿಸಿಕೊಡಬೇಕು. ಕ್ಷೇತ್ರದಲ್ಲಿ ಪ್ರಾಣಿ ಬಲಿಯನ್ನು ನಿಷೇಧಿಸಲಾಗಿದ್ದು, ಜಾತ್ರಾ ಅವಧಿಯಲ್ಲಿ ಯಾವುದೇ ರೀತಿಯ ಪ್ರಾಣಿಬಲಿಯಾಗದಂತೆ ಕ್ರಮ ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ಕೊಪ್ಪಳ ಪೊಲೀಸ್ ಉಪ ಅಧೀಕ್ಷಕರು, ತಹಶೀಲ್ದಾರರು, ಆರಕ್ಷಕ ಉಪ ನಿರೀಕ್ಷಕರು, ಪಶು ಸಂಗೋಪನೆ ಇಲಾಖೆ ಮತ್ತು ದೇವಸ್ಥಾನದ ಅಧಿಕಾರಿಗಳ ತಂಡವು ಕಾರ್ಯನಿರ್ವಹಿಸಬೇಕು. ಜಾತ್ರಾ ಸಮಯದಲ್ಲಿ ಹುಲಿಗಿ ಗ್ರಾಮದಲ್ಲಿ ಮದ್ಯಪಾನ, ಮದ್ಯ ಮಾರಾಟವನ್ನು ಸಂಪೂರ್ಣ ನಿಷೇಧಿಸಲಾಗಿದ್ದು, ಈ ನಿಟ್ಟಿನಲ್ಲಿ ಅಬಕಾರಿ ಇಲಾಖೆಯ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ವಂಟಗೋಡಿ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ತಹಶೀಲ್ದಾರ ವಿಠ್ಠಲ್ ಚೌಗಲಾ, ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಅರವಿಂದ ಸುತಗುಂಡಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# 6ನೇ ತರಗತಿಗೆ ಪ್ರವೇಶಾತಿ: ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2024–25ನೇ ಸಾಲಿಗೆ 6ನೇ ತರಗತಿಗೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಶಾಲೆಗಳಲ್ಲಿ ಅರ್ಹತಾ ಪರೀಕ್ಷೆ ಮೂಲಕ ಪ್ರವೇಶ ನೀಡಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ಮಮತಾ ಅವರು ತಿಳಿಸಿದ್ದಾರೆ.

ಶಾಲೆಗಳ ವಿವರ: ವಸತಿ ರಹಿತ ಶಾಲೆಗಳಾದ ಅಲ್ಲೀಪುರದ ವಿಶ್ವೇಶ್ವರಯ್ಯ ಪ್ರೌಢ ಶಾಲೆ (ಬೆಸ್ಟ್ ಸ್ಕೂಲ್), ವಿದ್ಯಾನಗರದ ನಂದ ವಸತಿ ಶಾಲೆ, ಬೆಳಗಲ್ ಕ್ರಾಸ್‌ನ ನಂದಿ ಪೌಢಶಾಲೆ (ಸಿ.ಬಿ.ಎಸ್.ಇ). ವಸತಿ ಸಹಿತ ಶಾಲೆಗಳಾದ ಸಿರುಗುಪ್ಪ ವಿಜಯಮೇರಿ ಪ್ರಾಥಮಿಕ ಶಾಲೆ, ದಮ್ಮೂರಿನ ಬೃಂದಾ ಇಂಟರ್‌ನ್ಯಾಷನಲ್ ಸ್ಕೂಲ್.

ಅರ್ಹತೆ: ಪರಿಶಿಷ್ಟ ಜಾತಿಯ ವಿದ್ಯಾರ್ಥಿ ಯಾಗಿರಬೇಕು. ವಿದ್ಯಾರ್ಥಿಯ ಕುಟುಂಬದ ಆದಾಯ ರೂ.2 ಲಕ್ಷ ಒಳಗಿರಬೇಕು. ವಿದ್ಯಾರ್ಥಿಯು 5 ನೇ ತರಗತಿಯಲ್ಲಿ ಕನಿಷ್ಠ ಶೇ.60 ಅಂಕ ಪಡೆದಿರಬೇಕು.

ಅರ್ಜಿ ಸಲ್ಲಿಸಲು 5 ನೇ ತರಗತಿ ಅಂಕಪಟ್ಟಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್‌ಕಾರ್ಡ್, ವಿದ್ಯಾರ್ಥಿಯ 2 ಪಾಸ್‌ಪೋರ್ಟ್ ಸೈಜ್ ಫೋಟೋ, ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ, ಮುಖ್ಯೋಪಾಧ್ಯಾಯರಿಂದ ನಡತೆ ಪ್ರಮಾಣ ಪತ್ರ, ಮೊಬೈಲ್ ಸಂಖ್ಯೆ ಹಾಗೂ ಇತರೆ ದಾಖಲಾತಿಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಮೇ 21 ರೊಳಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಕೌಲ್‌ಬಜಾರ್‌ನ ಮೊದಲನೇ ಗೇಟ್ ಹತ್ತಿರದ ಡಾ.ಬಿ.ಆರ್.ಅಂಬೇಡ್ಕರ್ ಭವನದ ಸಹಾಯಕ ನಿರ್ದೇಶಕರ ಕಚೇರಿ ಅಥವಾ ದೂ.08392–244738, ಮೊ.9480843073 ಗೆ ಸಂಪರ್ಕಿ ಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

14 ಭಾಷೆಗಳಲ್ಲಿ

ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ ಭೇಟಿ ನೀಡಿ

ನಿಮ್ಮ ಮಾತೃಭಾಷೆ ಆಯ್ಕೆ ಮಾಡಿಕೊಂಡು, ಸುದ್ದಿ, ಲೇಖನ ಓದಿರಿ...

www.hampitimes.com

# ಮೇ 16 ರಂದು ನೀರು ಸರಬರಾಜಿನಲ್ಲಿ ವ್ಯತ್ಯಯ

**ಹಂಪಿ ಟೈಮ್ಸ್ ಕೊಪ್ಪಳ**

ಮುನಿರಾಬಾದ್‌ನಲ್ಲಿ ಗಾಳಿ ಮತ್ತು ಮಳೆಯಿಂದಾಗಿ ವಿದ್ಯುತ್ ಕಂಬಗಳು ಬಿದ್ದು, ವಿದ್ಯುತ್ ಸ್ಥಗಿತಗೊಂಡಿರುವುದರಿಂದ ಕೊಪ್ಪಳ ನಗರಕ್ಕೆ ನೀರು ಸರಬರಾಜು ಮಾಡಲು ತೊಂದರೆ ಉಂಟಾಗಿರುತ್ತದೆ. ಮುನಿರಾಬಾದ್‌ನಿಂದ ಕೊಪ್ಪಳ ನಗರಕ್ಕೆ ಸಂಪರ್ಕವಿರುವ 600 ಎಂ.ಎಂ. ಪೈಪ್‌ಲೈನ್ ವಿವಿಧ ಸ್ಥಳಗಳಲ್ಲಿ ಲೀಕೇಜ್ ಆಗುತ್ತಿದ್ದು, ಇದರಿಂದಾಗಿ ಸಾಕಷ್ಟು ಪ್ರಮಾಣದಲ್ಲಿ ನೀರು ಪೋಲಾಗುತ್ತಿದ್ದು, ಅದನ್ನು ದುರಸ್ತಿ ಮಾಡಬೇಕಿರುತ್ತದೆ. ಆದ್ದರಿಂದ ವಿದ್ಯುತ್ ಕಂಬಗಳ ದುರಸ್ತಿ ಮತ್ತು ಲೀಕೇಜ್ ಇರುವ ಪೈಪ್‌ಲೈನ್ ದುರಸ್ತಿ ಮಾಡಿಸುತ್ತಿರುವ ಕಾರಣ ಮೇ 16 ರಂದು ಕೊಪ್ಪಳ ನಗರಕ್ಕೆ ನೀರು ಸರಬರಾಜು ಮಾಡುವ ಕಾರ್ಯವು ಸ್ಥಗಿತಗೊಳ್ಳಲಿದ್ದು, ಸಾರ್ವಜನಿಕರು ಸಹಕರಿಬೇಕು ಎಂದು ಕೊಪ್ಪಳ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎಸ್ಸೆಸ್ಸೆಲ್ಸಿ ಅನುತ್ತೀರ್ಣಗೊಂಡವರಿಗೆ ವಿಶೇಷ ತರಗತಿ ಆರಂಭ

**ಹಂಪಿ ಟೈಮ್ಸ್ ಕೊಪ್ಪಳ**

ಮಾರ್ಚ್/ಏಪ್ರಿಲ್–2024 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆ–1 ರಲ್ಲಿ ಅನುತ್ತೀರ್ಣಗೊಂಡ ಹಾಗೂ ಶೇ.60 ಕ್ಕಿಂತ ಕಡಿಮೆ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳು ಆರಂಭಗೊಂಡಿವೆ.

ಜೂನ್ 07 ರಿಂದ 14 ರವರೆಗೆ ಎಸ್.ಎಸ್.ಎಲ್.ಸಿ ಪರೀಕ್ಷೆ–2 ನಡೆಯಲಿದ್ದು, ವಿದ್ಯಾರ್ಥಿಗಳಿಗೆ ಮೇ 16 ರಿಂದ ಆಯಾ ಶಾಲೆಗಳಲ್ಲಿ ಪರೀಕ್ಷೆಗೆ ನೋಂದಣಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಜಿಲ್ಲೆಯ ಎಲ್ಲ ಪ್ರೌಢಶಾಲೆಗಳಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಮೇ 15 ರಿಂದ ವಿಶೇಷ ತರಗತಿಗಳು ಆರಂಭಗೊಂಡಿದ್ದು, ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗಿ ಇದರ ಸದುಪಯೋಗ ಮಾಡಿಕೊಳ್ಳಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರಾದ ಶ್ರೀಶೈಲ ಬಿರಾದಾರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೇಲುಸ್ತುವಾರಿ ಅಧಿಕಾರಿ ನೇಮಕ

ಮೊದಲ ಪುಟದಿಂದ

ಸಂಪರ್ಕಿಸದೇ ನಿಗದಿಪಡಿಸಿದ ವೇಳಾಪಟ್ಟಿ ದಿನಾಂಕಗಳಂದು ನಿಯೋಜಿತ ಅಧಿಕಾರಿಗಳನ್ನು ಸಂಪರ್ಕಿಸಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ವಿಜಯನಗರ ಜಿಲ್ಲೆಯ ಎಲ್ಲಾ ನಗರ ಸ್ಥಳಿಯ ಸಂಸ್ಥೆಗಳವ್ಯಾಪ್ತಿಯಲ್ಲಿಬರುವಸಾರ್ವಜನಿಕರಲ್ಲಿತಿಳಿಯಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಜಿಲ್ಲಾ ನಗರಾಭಿವೃದ್ಧಿ ಕೋಶದ ಕಚೇರಿಯ ಪ್ರಕಟಣೆ ತಿಳಿಸಿದೆ.

ವೇಳಾಪಟ್ಟಿ: ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯಿತಿಯಲ್ಲಿ ಮೇ 20ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1.30ರವರೆಗೆ ಅದೇ ರೀತಿ ಕೂಡ್ಲಿಗಿ ಪಟ್ಟಣ ಪಂಚಾಯಿತಿಯಲ್ಲಿ ಮೇ 20ರಂದು ಮಧ್ಯಾಹ್ನ 2.30 ರಿಂದ ಸಂಜೆ 5.30ರವರೆಗೆ., ಕೊಟ್ಟೂರ ಪಟ್ಟಣ ಪಂಚಾಯಿತಿಯಲ್ಲಿ ಮೇ 21ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1.30ರವರೆಗೆ ಅದೇ ರೀತಿ ಹರಪನಹಳ್ಳಿ ಪುರಸಭೆಯಲ್ಲಿ ಮೇ.21ರಂದು ಮಧ್ಯಾಹ್ನ 2.30 ರಿಂದ ಸಂಜೆ 5.30ರವರೆಗೆ., ಅದೇ ರೀತಿ ಹೂವಿನಹಡಗಲಿ ಪುರಸಭೆಯಲ್ಲಿ ಮೇ 22ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1.30ರವರೆಗೆ ಅದೇ ರೀತಿ ಹಗರಿಬೊಮ್ಮನಹಳ್ಳಿ ಪುರಸಭೆಯಲ್ಲಿ ಮೇ 22ರಂದು ಮಧ್ಯಾಹ್ನ 2.30 ರಿಂದ ಸಂಜೆ 5.30ರವರೆಗೆ., ಅದೇ ರೀತಿ ಕಮಲಾಪುರ ಪುರಸಭೆಯಲ್ಲಿ ಮೇ 23ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1.30ರವರೆಗೆ ನಿಯೋಜಿತ ಅಧಿಕಾರಿಗಳನ್ನು ಸಂಪರ್ಕಿಸಿ ಸಮಸ್ಯೆಗಳನ್ನು ಪರಿಹರಿಸಿ ಕೊಳ್ಳಬಹುದಾಗಿದೆ ಎಂದು ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ.

**IN THE COURT OF THE CIVIL JUDGE AND J.M.F.C. AT KUDLIGI**
**Crl. Misc. No. 527/2022**

Between:1. Smt. Thippeeramma w/o late Dyamanahalli Ramappa, aged about 75 years, 2.SMT. Obalamma D/o late Dyamanahalli Ramappa, aged about 55 years, Both are Hindus, agriculturists, R/o Obalashettihalli village, in Kudligi Taluk, Vijayanagara District .... Petitioner

And

The Tahasildar, Kudligi ....Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONERS.**

Whereas the above petitioner has instituted above petition to get the death certificate of their deceased petitioner's No-1's husband , P-2's father by name late Dyamanahalli Ramappa S/o late Haralu Hanumanthappa was died on 14.02.1992 at Obalashettihalli village, in Kudligi Taluk, and Vijayanagara District. On the file of the civil Judge & JMFC at Kudligi, The Tahsildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 16/05/2024 at 11 A.M. and interested persons are directed to produce all the documents upon which you intended to rely in support of your defence.

Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 30/04/2024

By Order of the court
Chief Ministerial Officer
Civil Judge & J.M.F.C at Kudligi

Siddanagouda
Advocate, Kudligi

## ಪುರಸಭಾ ಕಾರ್ಯಾಲಯ

**ಹರಪನಹಳ್ಳಿ–583131. ವಿಜಯನಗರ ಜಿಲ್ಲೆ.**

ಕರ್ನಾಟಕ ಸರ್ಕಾರ

**ದೂರವಾಣಿ ಸಂಖ್ಯೆ :08398–280258, ಫ್ಯಾಕ್ಸ್ : 08398–280581**
**Email: itstaff_ulb_harapanahalli@yahoo.com | Website: harapanahallitown.mrc.gov.in**

ಕ್ರ.ಸಂ:ಪುಸ:ಹ.ಹಳ್ಳಿ/ಲೇ.ಶಾ/ಸಿಆರ್/51/2022–23 ದಿನಾಂಕ:14.05.2024

### ಸಾರ್ವಜನಿಕ ಪ್ರಕಟಣೆ

ಈ ಮೂಲಕ ಹರಪನಹಳ್ಳಿ ಪಟ್ಟಣದ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾಕಾಯಿದೆ 1961ರ ಕಲಂ 14(ಎ)ರನ್ವಯ ಈ ಕೆಳಕಂಡಂತೆ ಅರ್ಜಿದಾರರು ಹರಪನಹಳ್ಳಿ ಪಟ್ಟಣದ ಅನುಮೋದಿತ ಮಹಾಯೋಜನೆಯಲ್ಲಿ ಭೂಉಪಯೋಗ ಬದಲಾವಣೆ ಕೋರಿರುತ್ತಾರೆ.

| ಅರ್ಜಿದಾರರ ಹೆಸರು | ಗ್ರಾಮ | ರಿಸನಂ | ಅನುಮೋದಿತ ಮಹಾ ಯೋಜನೆಯಂತೆ | ಅರ್ಜಿದಾರರುಕೋರಿರುವ ಭೂಉಪಯೋಗ | ವಿಸ್ತೀರ್ಣ ಎ–ಸೆಂ |
|---|---|---|---|---|---|
| ಶ್ರೀಮತಿ ನಾಲಬಂದಿ ಖಮರುನ್ನಿ ಕೋಂ ಲೇಟ್‌ರಾಜಾ ಸಾಬ್ | ಹರಪನಹಳ್ಳಿ | 47/ಎ | ಕೃಷಿ ವಲಯ | ವಸತಿ | 04 ಎಕರೆ 11 ಸೆಂಟ್ಸ್ |

ಹರಪನಹಳ್ಳಿ ಪಟ್ಟಣದ ಪ್ರಸ್ತಾಪಿತಜಮೀನಿನ ಪೂರ್ವದಿಕ್ಕಿಗೆ ಹರಪನಹಳ್ಳಿ–ಹೊಂಬಳಗಟ್ಟಿ ಹಾಲಿ 9.0 ಮೀ ಬಂಡಿದಾರಿರಸ್ತೆಯಿಂದ ಸಂಪರ್ಕಹೊಂದಿರುತ್ತದೆ. ನಾಗರೀಕ ಸೌಲಭ್ಯ ಒಳಗೊಂಡಂತೆ ಯೋಜಿತ ಬೆಳವಣಿಗೆಯ ವಸತಿ ವಿನ್ಯಾಸವನ್ನುಅಭಿವೃದ್ಧಿ ಪಡಿಸಲು ಉದ್ದೇಶಿಸಿರುತ್ತಾರೆ. ಭೂಉಪಯೋಗಬದಲಾವಣೆಆದೇಶವಾಗಿಕಂದಾಯಇಲಾಖೆಯಿಂದ ಭೂ ಪರಿವರ್ತನಾಆದೇಶದ ನಂತರ ಪ್ರಾಧಿಕಾರದಿಂದ ವಲಯ ನಿಯಮಾವಳಿಗಳನ್ವಯ ವಿನ್ಯಾಸಅನುಮೋದನೆಗೊಂಡುಅಭಿವೃದ್ಧಿ ಕಾರ್ಯಗಳ ಪ್ರಾರಂಭದಿಂದ ಸ್ಥಳೀಯರಿಗೆ ಉದ್ಯೋಗವಕಾಶ ಕಲ್ಪಿಸಿದಂತಾಗುವುದು ಹಾಗೂ ಎಲ್ಲಾ ಸೌಕರ್ಯಗಳನ್ನೊಳಗೊಂಡ ವಿನ್ಯಾಸದಲ್ಲಿನ ನಿವೇಶನಗಳನ್ನು ಮಾರಾಟ ಮಾಡಲಾಗುವುದರಿಂದ, ಒಂದು ಸುಸಜ್ಜಿತ ಬಡಾವಣೆಯಾಗಿ ಸುತ್ತಮುತ್ತಲಿನ ಪ್ರದೇಶವುಅಭಿವೃದ್ಧಿ ಪಡಿಸಿದಂತಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದಿರುತ್ತಾರೆ.

ಪ್ರಶ್ನಿತ ಪ್ರದೇಶವು ಹರಪನಹಳ್ಳಿ ಪಟ್ಟಣದಅನುಮೋದನೆಯಾದ ಮಹಾಯೋಜನೆಯಲ್ಲಿಕೃಷಿ ವಲಯಲ್ಲಿಕಾಯ್ದಿರಿಸಲಾಗಿರುತ್ತದೆ.ಸದರಿಜಮೀನನ್ನುವಸತಿಉದ್ದೇಶಕ್ಕಾಗಿ ಹೊಸ ಭೂಉಪಯೋಗ ನಿಗದಿಪಡಿಸುವಂತೆಕೋರಿರುತ್ತಾರೆ.

ಆದ್ದರಿಂದ, ಕರ್ನಾಟಕ ನಗರ ಮತ್ತುಗ್ರಾಮಾಂತರಯೋಜನಾಕಾಯ್ದೆ1961ರ ಕಲಂ 14(ಎ)ರ ಪ್ರಕಾರಕೃಷಿಉದ್ದೇಶದಿಂದವಸತಿಉದ್ದೇಶಕ್ಕಾಗಿ ಹೊಸ ಭೂ–ಉಪಯೋಗ ನಿಗದಿಪಡಿಸುವ ಸಂಬಂಧವಾಗಿ ಸಾರ್ವಜನಿಕರಿಂದಯಾವುದಾದರು ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ15 ದಿನಗಳೊಳಗಾಗಿ ಮುಖ್ಯಾಧಿಕಾರಿಗಳು/ಸದಸ್ಯ ಕಾರ್ಯದರ್ಶಿಗಳು, ಪುರಸಭೆಯೋಜನಾ ಪ್ರಾಧಿಕಾರ, ಹರಪನಹಳ್ಳಿ ಇವರಿಗೆ ಲಿಖಿತರೂಪದಲ್ಲಿಅಥವಾಖುದ್ದಾಗಿಯಾಗಲೀಅಥವಾ ನೋಂದಾಯಿತ ಅಂಚೆ ಮೂಲಕ ಸಲ್ಲಿಸಲು ತಿಳಿಸಲಾಗಿದೆ. ಅವಧಿ ಮೀರಿ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಸದಸ್ಯ ಕಾರ್ಯದರ್ಶಿ
ಹಾಗೂ ಮುಖ್ಯಾಧಿಕಾರಿಗಳು ಪುರಸಭೆಯೋಜನಾ ಪ್ರಾಧಿಕಾರ, ಹರಪನಹಳ್ಳಿ

## ಪುರಸಭಾ ಕಾರ್ಯಾಲಯ

**ಹರಪನಹಳ್ಳಿ–583131. ವಿಜಯನಗರ ಜಿಲ್ಲೆ.**

ಕರ್ನಾಟಕ ಸರ್ಕಾರ

**ದೂರವಾಣಿ ಸಂಖ್ಯೆ :08398–280258, ಫ್ಯಾಕ್ಸ್ : 08398–280581**
**Email: itstaff_ulb_harapanahalli@yahoo.com | Website: harapanahallitown.mrc.gov.in**

ಕ್ರ.ಸಂ:ಪುಸ:ಹ.ಹಳ್ಳಿ/ಲೇ.ಶಾ/ಸಿಆರ್/53/2022–23 ದಿನಾಂಕ:14.05.2024

### ಸಾರ್ವಜನಿಕ ಪ್ರಕಟಣೆ

ಈ ಮೂಲಕ ಹರಪನಹಳ್ಳಿ ಪಟ್ಟಣದ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾಕಾಯಿದೆ 1961ರ ಕಲಂ 14(ಎ)ರನ್ವಯ ಈ ಕೆಳಕಂಡಂತೆ ಅರ್ಜಿದಾರರು ಹರಪನಹಳ್ಳಿ ಪಟ್ಟಣದ ಅನುಮೋದಿತ ಮಹಾಯೋಜನೆಯಲ್ಲಿ ಭೂಉಪಯೋಗ ಬದಲಾವಣೆ ಕೋರಿರುತ್ತಾರೆ.

| ಅರ್ಜಿದಾರರ ಹೆಸರು | ಗ್ರಾಮ | ರಿಸನಂ | ಅನುಮೋದಿತ ಮಹಾ ಯೋಜನೆಯಂತೆ | ಅರ್ಜಿದಾರರುಕೋರಿರುವ ಭೂಉಪಯೋಗ | ವಿಸ್ತೀರ್ಣ ಎ–ಸೆಂ |
|---|---|---|---|---|---|
| ಶ್ರೀ ಎಸ್.ಕೆ. ಮಹಮ್ಮದ್ ಹುಸೇನ್ ಬಿನ್ ಲೇಟ್‌ಎಸ್.ಕೆ. ಮೋದಿನ್‌ಸಾಬ್ | ಹರಪನಹಳ್ಳಿ | 252/1 | ಕೃಷಿ ವಲಯ | ವಸತಿ | 0.50 ಸೆಂಟ್ಸ್ |

ಹರಪನಹಳ್ಳಿ ಪಟ್ಟಣದ ಪ್ರಸ್ತಾಪಿತ ಜಮೀನಿನ ದಕ್ಷಿಣದಿಕ್ಕಿಗೆ ಹರಪನಹಳ್ಳಿ–ಕೊಟ್ಟೂರು ಹಾಲಿ 24.0 ಮೀ ರಾಜ್ಯ ಹೆದ್ದಾರಿ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ. ನಾಗರೀಕ ಸೌಲಭ್ಯ ಒಳಗೊಂಡಂತೆ ಯೋಜಿತ ಬೆಳವಣಿಗೆಯ ವಸತಿ ವಿನ್ಯಾಸವನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಆದೇಶವಾಗಿ ಕಂದಾಯ ಇಲಾಖೆಯಿಂದ ಭೂ ಪರಿವರ್ತನಾ ಆದೇಶದ ನಂತರ ಪ್ರಾಧಿಕಾರದಿಂದ ವಲಯ ನಿಯಮಾವಳಿಗಳನ್ವಯ ವಿನ್ಯಾಸ ಅನುಮೋದನೆಗೊಂಡು ಅಭಿವೃದ್ಧಿ ಕಾರ್ಯಗಳ ಪ್ರಾರಂಭದಿಂದ ಸ್ಥಳೀಯರಿಗೆ ಉದ್ಯೋಗವಕಾಶ ಕಲ್ಪಿಸಿದಂತಾಗುವುದು ಹಾಗೂ ಎಲ್ಲಾ ಸೌಕರ್ಯಗಳನ್ನೊಳಗೊಂಡ ವಿನ್ಯಾಸದಲ್ಲಿನ ನಿವೇಶನಗಳನ್ನು ಮಾರಾಟ ಮಾಡಲಾಗುವುದರಿಂದ, ಒಂದು ಸುಸಜ್ಜಿತ ಬಡಾವಣೆಯಾಗಿ ಸುತ್ತಮುತ್ತಲಿನ ಪ್ರದೇಶವು ಅಭಿವೃದ್ಧಿ ಪಡಿಸಿದಂತಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದಿರುತ್ತಾರೆ.

ಪ್ರಶ್ನಿತ ಪ್ರದೇಶವು ಹರಪನಹಳ್ಳಿ ಪಟ್ಟಣದ ಅನುಮೋದನೆಯಾದ ಮಹಾಯೋಜನೆಯಲ್ಲಿ ಕೃಷಿ ವಲಯಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಜಮೀನನ್ನು ವಸತಿ ಉದ್ದೇಶಕ್ಕಾಗಿ ಹೊಸ ಭೂಉಪಯೋಗ ನಿಗದಿಪಡಿಸುವಂತೆ ಕೋರಿರುತ್ತಾರೆ.

ಆದ್ದರಿಂದ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾಕಾಯ್ದೆ 1961ರ ಕಲಂ 14(ಎ)ರ ಪ್ರಕಾರ ಕೃಷಿಉದ್ದೇಶದಿಂದ ವಸತಿ ಉದ್ದೇಶಕ್ಕಾಗಿ ಹೊಸ ಭೂ–ಉಪಯೋಗ ನಿಗದಿಪಡಿಸುವ ಸಂಬಂಧವಾಗಿ ಸಾರ್ವಜನಿಕರಿಂದ ಯಾವುದಾದರು ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಮುಖ್ಯಾಧಿಕಾರಿಗಳು/ಸದಸ್ಯ ಕಾರ್ಯದರ್ಶಿಗಳು, ಪುರಸಭೆ ಯೋಜನಾ ಪ್ರಾಧಿಕಾರ, ಹರಪನಹಳ್ಳಿ ಇವರಿಗೆ ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿಯಾಗಲೀ ಅಥವಾ ನೋಂದಾಯಿತ ಅಂಚೆ ಮೂಲಕ ಸಲ್ಲಿಸಲು ತಿಳಿಸಲಾಗಿದೆ. ಅವಧಿ ಮೀರಿ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಸದಸ್ಯ ಕಾರ್ಯದರ್ಶಿ
ಹಾಗೂ ಮುಖ್ಯಾಧಿಕಾರಿಗಳು ಪುರಸಭೆಯೋಜನಾ ಪ್ರಾಧಿಕಾರ, ಹರಪನಹಳ್ಳಿ

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

**16–05–2024 – ಗುರುವಾರ**

| | |
|---|---|
| ತಿಥಿ | : ಅಷ್ಟಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಮಾಘಾ |
| ಯೋಗ | : ಧ್ರುವ |
| ಕರಣ | : ಭವ |
| ಸೂರ್ಯೋದಯ | : 05:46:29 |
| ಸೂರ್ಯಾಸ್ತ | : 19:00:24 |
| ರಾಹು | : 14:03–15:42 |
| ಯಮಘಂಡ | : 05:46–07:26 |
| ಗುಳಿಕ | : 09:05–10:44 |

## ತುಂಗಭದ್ರಾ ನೀರಿನ ಮಟ್ಟ



**ಬುಧವಾರ : 15–05–2024**


| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1577.59 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 00 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.412 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1577.67 ಅಡಿ |
| ಒಳ ಹರಿವು | 1868 ಕ್ಯುಸೆಕ್ |
| ಹೊರ ಹರಿವು | 215 ಕ್ಯುಸೆಕ್ |
| ಸಾಮರ್ಥ್ಯ | 3.443 ಟಿಎಂಸಿ |

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
Join for vijayanagara dist. updates

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
Follow for vijayanagara dist. updates

# ಸೋಂಕಿತ ಕುರಿಗಳನ್ನ ತರಲಾರೆವು ವೈದ್ಯರು ಬಂದು ಚಿಕಿತ್ಸೆಯನ್ನು ನೀಡಲಿ

### ರೋಗಕ್ಕೆ ತುತ್ತಾಗಿ ಸಾವಿಗೀಡಾದ ಕುರಿಗಳ ಪರಿಹಾರಕ್ಕೆ ಒತ್ತಾಯ | ತಹಶೀಲ್ದಾರ್‌ಗೆ ಕುರಿಗಾಹಿಗಳಿಂದ ಮನವಿ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**
ಇತ್ತೀಚಿಗೆ ಕುರಿಗಳಿಗೆ ಸಾಂಕ್ರಾಮಿಕ ರೋಗಗಳಾದ ಅಂತ್ರಾಕ್ಸ್ ಹಾಗೂ ಸಿಡುಬು ರೋಗ ಉಲ್ಬಣಗೊಂಡು ಕುರಿಗಳು ಸಾವನ್ನಪ್ಪುತ್ತಿವೆ. ಕೂಡಲೆ ಉಲ್ಬಣಗೊಳ್ಳುತ್ತಿರುವ ರೋಗ ನಿಯಂತ್ರಿಸಲು ಸೂಕ್ತ ಚಿಕಿತ್ಸೆ ನೀಡುವಂತೆ ಒತ್ತಾಯಿಸಿ ತಹಶಿಲ್ದಾರ್ ಹಾಗೂ ಪಶು ಸಂಗೋಪನೆ ಇಲಾಖೆಯ ಸಹಾಯಕ ನಿರ್ದೇಶಕರಿಗೆ ತಾಲೂಕಿನ ಕುರಿಗಾಯಿಗಳು ಮನವಿ ಸಲ್ಲಿಸಿದರು.

ರಾಜ್ಯ ಕುರುಬ ಸಂಘದ ನಿರ್ದೇಶಕ ಮರಿ ರಾಮಪ್ಪ ಮಾತನಾಡಿ, ಕುರಿಗಾಯಿಗಳಿಗೆ ಕುರಿ ಸಾಕಾಣಿಕೆ ಕುಲ ಕಸುಬಾಗಿದೆ, ಹೆಚ್ಚಾಗಿ ಅನಕ್ಷರಸ್ಥರಾಗಿರುವ ಅವರಲ್ಲಿ, ತಮ್ಮ ಕುರಿಗಳಿಗೆ ಈ ಸಾಂಕ್ರಾಮಿಕ ರೋಗಗಳಿಂದ ರಕ್ಷಣೆ ಮಾಡಿಕೊಳ್ಳುವಲ್ಲಿ ವಿಫಲರಾಗುತ್ತಿದ್ದಾರೆ. ಇದರಿಂದ ಕುರಿಗಳು ರೋಗಕ್ಕೆ ತುತ್ತಾಗಿ ಆರ್ಥಿಕ ಸಂಕಷ್ಟಕ್ಕೀಡಾಗುತ್ತಿದ್ದಾರೆ. ತಾಲೂಕು ಆಡಳಿತ ಮತ್ತು ಪಶು ಸಂಗೋಪನೆ ಇಲಾಖೆಯಿಂದ ಕೂಡಲೆ ಸೂಕ್ತ ಚಿಕಿತ್ಸೆ ಕಲ್ಪಿಸಬೇಕು. ಇದರೊಂದಿಗೆ ಸರಕಾರದ ಪರಿಹಾರ ಮೃತ ಕುರಿಗಳನ್ನು ತಾಲೂಕು ಆಸ್ಪತ್ರೆಯವರೆಗೆ ತೆಗೆದುಕೊಂಡು ಬರುವುದು ಕೂಡ ತೊಂದರೆಯಾಗುತ್ತದೆ. ವೈದ್ಯರೆ ಸ್ಥಳಗಳಿಗೆ ಭೇಟಿ ನೀಡಿ ಪರೀಕ್ಷಿಸಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಕೋರಿ ಗೋಣಿ ಬಸಪ್ಪ ಮಾತನಾಡಿ, ಈ ವರ್ಷದ ಬಿರುಬಿಸಿಲಿಗೆ ಕುರಿಗಾಯಿಗಳು ತಾವು ಸಾಕಿದ ಕುರಿಗಳಿಗೆ ನೀರುಣಿಸಲು ಸಾಧ್ಯವಾಗದೆ ಎಲ್ಲಿ ಮೇವು ದೊರೆಯುತ್ತೋ ಅಲ್ಲಿಯವರೆಗೂ ಕುರಿಗಳನ್ನು ಹೊಡೆದುಕೊಂಡು ಅಲೆದಾಡುವಂತ ಪರಿಸ್ಥಿತಿ ಬಂದೊದಗಿದೆ. ಇದೇ ಕಾಯಕಮಾಡಿಕೊಂಡಿರುವ ಅವರು, ತಾವು ಸಾಕಿದ ಕುರಿಗಳಿಗೆ ಇತ್ತೀಚೇಗೆ ಸಾಂಕ್ರಾಮಿಕ ರೋಗಗಳಿಗೆ ಬಲಿಯಾಗುತ್ತಿರುವ ಕುರಿಗಳನ್ನು ಕಂಡು ಮತ್ತಷ್ಟು ಆತಂಕಕ್ಕೊಳಗಾಗಿದ್ದಾರೆ. ಕೂಡಲೆ ಕುರಿಗಳನ್ನು ಪರೀಕ್ಷಿಸಿ, ರೋಗ ನಿರೋಧಕ ಲಸಿಕೆಗಳನ್ನು ಹಾಕಬೇಕು, ಜೊತೆಗೆ ಸತ್ತ ಕುರಿಗಳಿಗೆ ಶೀಘ್ರ ಪರಿಹಾರ ದೊರಕಿಸಿಕೊಡುವಂತೆ ಒತ್ತಾಯಿಸಿದರು.

ಈ ಸಂಧರ್ಭದಲ್ಲಿ ಯಡ್ರಮ್ಮನಹಳ್ಳಿ ಲೋಕೇಶ್, ಬ್ಯಾಸಿಗದೇರಿ ಮಂಜುನಾಥ್, ಚಿಗರಿ ಹನುಮಂತಪ್ಪ, ಬಸರಕೋಡು ಮೈಲಪ್ಪ, ಭರಮನಗೌಡ, ಕೊಟ್ರೇಶ್, ಸಿದ್ದಲಿಂಗಪ್ಪ, ಜೆ. ಕೊಟ್ರೇಶ್ ಸೇರಿದಂತೆ ಇನ್ನಿತರರು ಇದ್ದರು.

## ವಿಜ್ಞಾನ

# ಚಳಿಗಾಲದಲ್ಲಿ ತೆಂಗಿನ ಎಣ್ಣೆ ಏಕೆ ಹೆಪ್ಪುಗಟ್ಟುತ್ತದೆ?

**ಆರ್.ಬಿ.ಗುರುಬಸವರಾಜ**
ಬೆಳಿಗ್ಗೆ ಶಾಲೆಗೆ ಹೊರಡಲು ತಯಾರಿ ನಡೆಸಿದ್ದ ದೀಪಿಕಾ ತಲೆಬಾಚಿಕೊಳ್ಳಲು ಮುಂದಾದಳು. ತೆಂಗಿನ ಎಣ್ಣೆ ಬಾಟಲಿ ಒಪನ್ ಮಾಡಿ ಕೈಗೆ ಸುರಿದುಕೊಂಡಳು. ಎಣ್ಣೆ ಬೀಳಲಿಲ್ಲ. “ಮಮ್ಮಿ, ತೆಂಗಿನ ಎಣ್ಣೆ ಖಾಲಿಯಾಗಿದೆ. ಎಣ್ಣೆ ಇಲ್ಲದೆ ಹೇಗೆ ತಲೆ ಬಾಚಿಕೊಳ್ಳಲಿ” ಎಂದು ಕೂಗಾಡಿದಳು. ‘ಲೇಯ್ ಮೊನ್ನೆಯಷ್ಟೇ ಹೊಸ ಬಾಟಲಿ ತಂದಿದೆ. ಅದ್ಹೇಗೆ ಖಾಲಿಯಾಗುತ್ತೆ. ಸರಿಯಾಗಿ ನೋಡು’ ಎಂದಳು ತಾಯಿ. ದೀಪಿಕಾ ತೆಂಗಿನ ಎಣ್ಣೆ ಬಾಟಲಿಯನ್ನು ಜೋರಾಗಿ ಮೇಲೆ ಕೆಳಗೆ ಮಾಡಿದಳು. ಒಂದಿಷ್ಟು ಗಟ್ಟಿಯಾದ ಎಣ್ಣೆ ಬಂದಿತು. “ಮಮ್ಮಿ ತೆಂಗಿನ ಎಣ್ಣೆ ವ್ಯಾಸಲಿನ್‌ನಂತೆ ಗಟ್ಟಿಯಾಗಿದೆ, ಬೀಳುತ್ತಿಲ್ಲ” ಎಂದು



ಪುನಹ ಕೂಗಿದಳು. ‘ಚಳಿಗಾಲಕ್ಕೆ ಹೆಪ್ಪುಗಟ್ಟಿದೆ ಎನಿಸುತ್ತದೆ. ತೆಂಗಿನ ಎಣ್ಣೆ ಬಾಟಲಿಯನ್ನು ಒಲೆ ಮೇಲಿನ ಬಿಸಿನೀರಿನ ಹಂಡೆಯಲ್ಲಿ ಸ್ವಲ್ಪ ಹೊತ್ತು ಹಿಡಿ. ಎಣ್ಣೆ ಕರಗಿ ಸರಾಗವಾಗಿ ಬೀಳುತ್ತೆ’ ಎಂದಳು ತಾಯಿ. “ಚಳಿಗಾಲದಲ್ಲಿ ತೆಂಗಿನ ಎಣ್ಣೆ ಏಕೆ ಹೆಪ್ಪುಗಟ್ಟುತ್ತದೆ” ಎಂದಳು. ತಾಯಿ ತನ್ನ ಜ್ಞಾನಕ್ಕನುಗುಣವಾಗಿ ಅದರ ಹಿಂದಿನ ವಿಜ್ಞಾನ ತಿಳಿಸಿದಳು.

ತೆಂಗಿನ ಎಣ್ಣೆಯು ಅರೆ ಘನವಾಗಬಲ್ಲ ಒಂದು ತೈಲವಾಗಿದೆ. ಇದು ಸಸ್ಯಜನ್ಯ ಎಣ್ಣೆಯಾಗಿದ್ದು 76 ಡಿಗ್ರಿ ಫ್ಯಾರನ್‌ಹೀಟ್ (24 ಡಿಗ್ರಿ ಸೆಲ್ಸಿಯಸ್)ಗಿಂತ ಕಡಿಮೆ ತಾಪಮಾನದಲ್ಲಿ ಘನೀಭವಿಸುವ ಸಸ್ಯಜನ್ಯ ಕೊಬ್ಬನ್ನು ಹೊಂದಿದೆ. ಇದರಲ್ಲಿರುವ ‘ಲಾರಿಕ್ ಆಮ್ಲ’ವು ಕಡಿಮೆ ತಾಪಮಾನದಲ್ಲಿ ಗಟ್ಟಿಯಾಗಲು ಪ್ರಾರಂಭಿಸುತ್ತದೆ. ಇದರಿಂದಾಗಿ ತೆಂಗಿನ ಎಣ್ಣೆಯು ಮಂದವಾಗಿ ಬಿಳಿ ಕೆನೆಯ ವಿನ್ಯಾಸಕ್ಕೆ ಬದಲಾಗುತ್ತದೆ. ಚಳಿಗಾಲದಲ್ಲಿ ತಾಪಮಾನವು ಕಡಿಮೆ ಇರುವುದರಿಂದ ತೆಂಗಿನ ಎಣ್ಣೆಯು ಘನ ಅಥವಾ ಅರೆ ಘನವಾಗುವುದು ಸಾಮಾನ್ಯವಾಗಿದೆ. ಚಳಿಗಾಲದಲ್ಲಿ ಅದನ್ನು ಬೆಚ್ಚಗಿನ ಕೋಣೆಯಲ್ಲಿ ಇರಿಸುವ ಮೂಲಕ ಅಥವಾ ಬೆಚ್ಚಗಿನ ನೀರಿನ ಬಟ್ಟಲಿನಲ್ಲಿ ಧಾರಕವನ್ನು ಅದ್ದುವ ಮೂಲಕ ಅಥವಾ ಬಾಟಲಿಯನ್ನು ಕೈಗಳಿಂದ ಉಜ್ಜುವ ಮೂಲಕ ಬಿಸಿ ನೀಡಿ ತೆಂಗಿನ ಎಣ್ಣೆಯನ್ನು ನಿಧಾನವಾಗಿ ದ್ರವೀಕರಿಸಬಹುದು.

ತೆಂಗಿನ ಎಣ್ಣೆಯ ಘನೀಕರಣವು ಅದರ ಗುಣಮಟ್ಟ ಅಥವಾ ಪೌಷ್ಟಿಕಾಂಶದ ಮೌಲ್ಯದ ಮೇಲೆ ಅವಲಂಬಿತವಾಗಿದೆ. ಉತ್ತಮ ಗುಣಮಟ್ಟ ಹೊಂದಿದ ತೆಂಗಿನ ಎಣ್ಣೆಯು ಚಳಿಗಾಲದಲ್ಲಿ ಬೇಗನೆ ಘನೀಕರಣ ಹೊಂದುತ್ತದೆ.

# ಅವಿರತ ಪ್ರಯತ್ನವಿದ್ದಲ್ಲಿ ಅಸಾಧ್ಯವೆಂಬುದಿಲ್ಲ

### ಭಗೀರಥ ಜಯಂತ್ಯುತ್ಸವದಲ್ಲಿ ತಹಸೀಲ್ದಾರ್ ಚಂದ್ರಶೇಖರ ಶಂಬಣ್ಣ ಗಾಳಿ ಹೇಳಿಕೆ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**
ಯಾವುದೇ ಅಛಲವಾದ ನಂಬಿಕೆ ಮತ್ತು ಧೃಢ ಸಂಕಲ್ಪಕ್ಕೆ ಮಹತ್ವ ಇದೆ ಎಂಬುದನ್ನು ಶ್ರೀಭಗೀರಥ ಮಹರ್ಷಿಗಳು ಸಾರಿದರು ಎಂದು ಇಲ್ಲಿಯ ತಹಸೀಲ್ದಾರ ಚಂದ್ರಶೇಖರ್ ಶಂಬಣ್ಣ ಗಾಳಿ ಅಭಿಪ್ರಾಯ ವ್ಯಕ್ತಪಡಿಸಿದರು.



ಪಟ್ಟಣದ ತಾಲೂಕು ಆಡಳಿತ ಸೌಧದಲ್ಲಿ ತಾಲೂಕು ಆಡಳಿತದಿಂದ ಹಮ್ಮಿಕೊಳ್ಳಲಾಗಿದ್ದ ಶ್ರೀ ಭಗೀರಥ ಮಹರ್ಷಿ ಜಯಂತ್ಯುತ್ಸವದಲ್ಲಿ ಮಾತನಾಡಿದರು. ದೇವಗಂಗೆಯನ್ನು ಧರೆಗೆ ಹರಿಸಲು ಕಾರಣರಾದ ಮಹಾತ್ಮರಾದ ಅವರನ್ನು ನೆನೆಯುವ ದಿನ ಇದಾಗಿದೆ ಎಂದರು. ಯಾರೇ ಆಗಲಿ ಅವಿರತ ಪ್ರಯತ್ನದಲ್ಲಿದ್ದರೆ, ಅಸಾಧ್ಯವೆಂಬುದಿಲ್ಲ ಎಂದರು. ಈ ಹಿನ್ನೆಲೆಯಲ್ಲಿ ಉಪ್ಪಾರ ಸಮುದಾಯದವರು ಶ್ರೀಭಗೀರಥ ಮಹರ್ಷಿಗಳನ್ನು ಮೂಲಪುರುಷ ನೆಂದು ಅರಾಧಿಸುತ್ತಿರುವುದು ಶ್ಲಾಘನೀಯ ಎಂದರು. ಭಗೀರಥ ಉಪ್ಪಾರ ಸಂಘದ ತಾಲೂಕು ಅಧ್ಯಕ್ಷ ಗುಂಡ್ರು ಹನುಮಂತಪ್ಪ, ಹಿರಿಯ ಮುಖಂಡ ಅಂಬಳಿ ಈಶಪ್ಪ ಮಾತನಾಡಿದರು. ಈ ವೇಳೆ ತಾ.ಪಂ.ಮಾಜಿ ಸದಸ್ಯ ಉಪ್ಪಾರ ಬಾಲಣ್ಣ, ಮುಖಂಡರಾದ ಮುದುಕಪ್ಪ, ಮಾಲ್ವಿ ಬಸವರಾಜ್, ಬಂಡಿಹಳ್ಳಿ ಪ್ರಕಾಶ್, ಅಯ್ಯಪ್ಪಸ್ವಾಮಿ, ಧನಂಜಯ್, ಕಾರ್ತಿಕ್ ಉಪ್ಪಾರ್, ಅಂಕಸಮುದ್ರ ಯು. ವೆಂಕಟೇಶ್ ಮತ್ತಿತರರು ಇದ್ದರು.

# ಮೇ 18 ರಂದು ‘ತಿಂಗಳ ಸೊಬಗು’ ಸಾಂಸ್ಕೃತಿಕ ಕಾರ್ಯಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಸಾಂಸ್ಕೃತಿಕ ಸಮುಚ್ಛಯ ನಿರ್ವಹಣಾ ಸಮಿತಿ ವತಿಯಿಂದ ಕಲಾ ಪ್ರತಿಭೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಮೇ 18 ರಂದು ಸಂಜೆ 06.30 ಗಂಟೆಗೆ ನಗರದ ಡಾ.ರಾಜ್‌ಕುಮಾರ್ ರಸ್ತೆಯ ನಾಡೋಜ ಸುಭದ್ರಮ್ಮ ಮನ್ಸೂರು ಬಯಲು ರಂಗಮಂದಿರ ಸಾಂಸ್ಕೃತಿಕ ಸಮುಚ್ಛಯದಲ್ಲಿ ‘ತಿಂಗಳ ಸೊಬಗು’ ಸಾಂಸ್ಕೃತಿಕ ಕಾರ್ಯಕ್ರಮ ಗಳನ್ನು ಏರ್ಪಡಿಸಲಾಗಿದೆ. ಈ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಎ.ಎರ್ರಿಸ್ವಾಮಿ ಅವರಿಂದ ಹಾಸ್ಯ ಚಟಾಕಿಗಳು, ಸೂರ್ಯಕಲಾ ಟ್ರಸ್ಟ್ ವತಿಯಿಂದ ಸಮೂಹ ನೃತ್ಯ ಮತ್ತು ಬಳ್ಳಾರಿಯ ಶ್ರೀ ಗುರು ಪುಟ್ಟರಾಜ ಸಂಗೀತ ಪಾಠಶಾಲೆ ವತಿಯಿಂದ ಸುಗಮ ಸಂಗೀತ ಕಾರ್ಯಕ್ರಮ ನಡೆಯಲಿವೆ. ಸಾರ್ವಜನಿಕರಿಗೆ ಪ್ರವೇಶ ಮುಕ್ತವಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ವೀಕ್ಷಿಸುವ ಮೂಲಕ ಯಶಸ್ವಿಗೊಳಿಸಬೇಕು ಎಂದು ಕೋರಲಾಗಿದೆ.

# ಮಾನವ ಪ್ರಾಣಿ ಸಂಘರ್ಷ ತಗ್ಗಿಸಿದ ನೀರಿನ ತೊಟ್ಟಿ

**ಹಂಪಿ ಟೈಮ್ಸ್ ಬಳ್ಳಾರಿ**
ಈ ವರ್ಷ ಸುದೀರ್ಘ ಬೇಸಿಗೆಯ ಅವಧಿಯಲ್ಲಿ ಸಂಡೂರು ತಾಲೂಕಿನ ಎರಡೂ ವಲಯಗಳಲ್ಲಿ ನೀರಿನ ಕೊರತೆ ನೀಗಿಸಲು ಅರಣ್ಯ ಇಲಾಖೆಯು ಇಡೀ ತಾಲೂಕಿನ ಎಲ್ಲಾ ಕಾಡುಗಳ ಆಯಕಟ್ಟಿನ ಸ್ಥಳಗಳಲ್ಲಿ ವಿಶಾಲವಾದ ನೀರು ತೊಟ್ಟಿಗಳನ್ನು ನಿರ್ಮಿಸಿ ಕಾಲಕಾಲಕ್ಕೆ ನೀರು ತುಂಬಿಸಿದ್ದರಿಂದ ಮೊದಲ ಬಾರಿಗೆ ತಾಲೂಕಿನಲ್ಲಿ ಮಾನವ ಮತ್ತು ವನ್ಯ ಪ್ರಾಣಿಗಳ ನಡುವಿನ ಸಂಘರ್ಷವನ್ನು ತಪ್ಪಿಸಲಾಗಿದೆ ಎಂದು ಬಳ್ಳಾರಿ ಪ್ರಾದೇಶಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂದೀಪ್ ಸೂರ್ಯವಂಶಿ ಅವರು ತಿಳಿಸಿದ್ದಾರೆ.

ಸಂಡೂರಿನ ಕಾಡುಗಳಲ್ಲಿ ಚಿರತೆ, ಕರಡಿ, ಕೊಂಡುಕುರಿ, ಕಾಡುಹಂದಿ, ಮುಳ್ಳುಹಂದಿ, ತಾಳೆ ಪುನುಗು, ಚುಕ್ಕೆ ಪುನುಗು, ಕೆಂಪು ಮೂತಿಯ ಮಂಗ, ಕೋಡುಗ, ಮುಂಗುಸಿ ಮುಂತಾದ ಸಸ್ತನಿಗಳು, ವಿವಿಧ ಸರೀಸೃಪಗಳು ಹಾಗೂ ಅಪಾರ ಸಂಖ್ಯೆಯ ಹಕ್ಕಿಗಳಿದ್ದು, ಬೇಸಿಗೆಯಲ್ಲಿ ನೀರಿನ ಅವಶ್ಯಕತೆ ಹೆಚ್ಚು ಇದ್ದು, ಕಾಡಿನಲ್ಲಿರುವ ಕೆರೆ ಕಟ್ಟೆಗಳು, ಚೆಕ್‌ಡ್ಯಾಂಗಳಲ್ಲಿ ನೀರು ಬತ್ತಿಹೋದ ನಂತರ ಪ್ರಾಣಿ–ಪಕ್ಷಿಗಳು ನೀರನ್ನು ಹರಸಿ ಕೃಷಿಭೂಮಿ ಹಾಗೂ ಜನ ವಸತಿ ಪ್ರದೇಶದ ಕಡೆಗೆ ಬಂದಾದ ಮನುಷ್ಯನ ಮೇಲೆ ಉದ್ದೇಶ ಪೂರ್ವಕವಲ್ಲದ ದಾಳಿ ನಡೆಯುವ ಸಾಧ್ಯತೆ ತಪ್ಪಿಸಲು ಅರಣ್ಯ ಇಲಾಖೆ ವತಿಯಿಂದ ಈ ಕಾರ್ಯ ಕೈಗೊಳ್ಳಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಲ್ಲದೇ ಇಂತಹ ಸಂದರ್ಭದಲ್ಲಿ ಕಂಗೆಟ್ಟ ಪ್ರಾಣಿಗಳ ಮೇಲೆ ಜನರು ಆಕ್ರಮಣ ಮಾಡಿ ಅವುಗಳನ್ನು ಕೊಲ್ಲುವ ಸಾಧ್ಯತೆಯೂ ಇರುತ್ತದೆ. ಈ ಪರಿಸ್ಥಿತಿಯನ್ನು ಮುಂದಾಲೋಚಿಸಿದ ಅರಣ್ಯ ಇಲಾಖೆಯು ಸಂಡೂರು ತಾಲೂಕಿನ ಉತ್ತರ ಹಾಗೂ ದಕ್ಷಿಣ ವಲಯಗಳಲ್ಲಿ ಅನೇಕ ನೀರಿನ ತೊಟ್ಟಿಗಳನ್ನು ನಿರ್ಮಾಣ ಮಾಡಿ ನೀರು ತುಂಬಿಸಿದೆ. ಇದರಿಂದಾಗಿ ಎಲ್ಲಾ ಪ್ರಾಣಿಗಳು ತೊಟ್ಟಿಗಳ ನೀರನ್ನು ಕುಡಿದು ಕಾಡಿನಲ್ಲಿಯೇ ಉಳಿಯಲು ಸಾಧ್ಯವಾಗಿದೆ ಎಂದು ಅವರು ಹೇಳಿದ್ದಾರೆ.



> ಸಂಡೂರು ಉತ್ತರ ವಲಯದಲ್ಲಿ ಈ ವರ್ಷ 15 ನೀರಿನ ತೊಟ್ಟಿಗಳನ್ನು ಕಾಡಿನ ಮಧ್ಯೆ ನಿರ್ಮಿಸಲಾಗಿದ್ದು, ಎಲ್ಲಾ ನೀರಿನ ತೊಟ್ಟಿಗಳಿಗೆ ಕರಡಿ, ಚಿರತೆ, ಕೊಂಡು ಕುರಿ, ವಾನರಗಳು, ಹಕ್ಕಿಗಳು ಭೇಟಿ ನೀಡಿ ತಮ್ಮ ದಾಹವನ್ನು ನೀಗಿಸಿಕೊಳ್ಳುತ್ತಿರುವುದು ತುಂಬಾ ಹರ್ಷದ ಸಂಗತಿ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ನೀರಿನ ತೊಟ್ಟಿಗಳನ್ನು ನಿರ್ಮಿಸಿ ಕಾಲ ಕಾಲಕ್ಕೆ ನೀರು ತುಂಬಿಸಲಾಗುವುದು.
>
> – **ಸಯ್ಯದ್ ದಾದಾ ಖಲಂದರ್,** ವಲಯ ಅರಣ್ಯಾಧಿಕಾರಿ, ಸಂಡೂರು ಉತ್ತರ ವಲಯ

> ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಮಾರ್ಗದರ್ಶನದಲ್ಲಿ ಸಂಡೂರು ದಕ್ಷಿಣ ವಲಯ ಆಯಕಟ್ಟಿನ ಸ್ಥಳದಲ್ಲಿ ಹೊಸದಾಗಿ 35 ನೀರಿನ ತೊಟ್ಟಿಗಳನ್ನು ನಿರ್ಮಿಸಲಾಗಿದ್ದು, ಕಳೆದ 5 ತಿಂಗಳಿಂದ ಅವುಗಳಲ್ಲಿ ಕಾಲಕಾಲಕ್ಕೆ ನೀರನ್ನು ತುಂಬಿಸಲಾಗುತ್ತಿದೆ. ಇದರಿಂದ ನಮ್ಮ ವಲಯದಲ್ಲಿ ಮಾನವ ವನ್ಯಜೀವಿ ಸಂಘರ್ಷ ಕಡಿಮೆಯಾಗಿದೆ.”
>
> – **ಗಿರೀಶ್ ಕುಮಾರ್**, ವಲಯ ರಣ್ಯಾಧಿಕಾರಿ, ಸಂಡೂರು ದಕ್ಷಿಣ ವಲಯ

ವನ್ಯಜೀವಿ ಸಂಶೋಧಕ ಡಾ.ಸಮದ್ ಕೊಟ್ಟೂರು ಅವರು, ನೀರಿನ ತೊಟ್ಟಿಗಳ ಹಾಗೂ ಸುತ್ತಮುತ್ತ ಕಾಡು ಪ್ರಾಣಿಗಳ ಚಲನವಲನ ಅಧ್ಯಯನಿಸಿ ಆಯ್ದ ನೀರಿನ ತೊಟ್ಟಿಗಳ ಸುತ್ತಮುತ್ತ ಸುಮಾರು 30 ಕ್ಯಾಮೆರಾ ಟ್ರಾಪ್‌ಗಳನ್ನು ಕಟ್ಟಿ ಅಲ್ಲಿಗೆ ಬರುವ ಪ್ರಾಣಿಗಳನ್ನು ದಾಖಲಿಸಿದ್ದಾರೆ.

> ನೀರಿನ ತೊಟ್ಟಿಗಳ ಸುತ್ತಮುತ್ತ ಕ್ಯಾಮರಾ ಟ್ರಾಪ್‌ಗಳನ್ನು ಕಟ್ಟಿ ಅಲ್ಲಿಗೆ ಬರುವ ವನ್ಯಜೀವಿಗಳನ್ನು ಅಧ್ಯಯನ ಮಾಡಲಾಗುತ್ತಿದ್ದು, ಅತ್ಯಂತ ಅಪರೂಪವಾದ, ಸಾಮಾನ್ಯವಾಗಿ ಕಾಣದ ಹಾಗೂ ಅತಿ ಚುರುಕಿನ ಕೊಂಡುಕುರಿ (ಫೋರ್–ಹಾರ್ನ್ ಆಂಟಿಲೋಪ್) ಗಳು ಅಪಾರ ಸಂಖ್ಯೆಯಲ್ಲಿ ನೀರಿನ ತೊಟ್ಟಿಗಳಿಗೆ ಭೇಟಿ ನೀಡುತ್ತಿವೆ. ವಿನಾಶದ ಅಂಚಿನಲ್ಲಿರುವ ಅಪರೂಪದ ಸಸ್ತನಿಯನ್ನು ಸಂರಕ್ಷಿಸಲು ಹೆಚ್ಚಿನ ಅಧ್ಯಯನ ಮಾಡಲಾಗುತ್ತಿದೆ. ಕಾಡಿನೆಲ್ಲೆಡೆ ನೀರಿನ ತೊಟ್ಟಿಗಳನ್ನು ನಿರ್ಮಿಸಿ ವನ್ಯಜೀವಿಗಳಿಗೆ ಮರುಜೀವ ನೀಡಿದ ಅರಣ್ಯ ಇಲಾಖೆಗೆ ಧನ್ಯವಾದಗಳು.
>
> – **ಡಾ.ಸಮದ್ ಕೊಟ್ಟೂರು,** ವನ್ಯಜೀವಿ ಸಂಶೋಧಕ

ಗಣಿ ಪ್ರದೇಶದ ಸುತ್ತಲೂ ಸಹ ನೀರಿನ ತೊಟ್ಟಿಗಳನ್ನು ನಿರ್ಮಿಸಲಾಗಿದ್ದು, ಅಲ್ಲಿಯೂ ಸಹ ಎಲ್ಲಾ ವನ್ಯಜೀವಿಗಳ ಸಂಚರಿಸಿ ಈ ತೊಟ್ಟಿಗಳ ನೀರನ್ನು ಕುಡಿಯುವುದನ್ನು ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ.

ಮುಂದಿನ ದಿನಗಳಲ್ಲಿ ಜಿಲ್ಲೆಯ ವಿವಿಧ ಅರಣ್ಯ ಪ್ರದೇಶಗಳಲ್ಲಿ ಹೆಚ್ಚಿನ ನೀರಿನ ತೊಟ್ಟಿಗಳನ್ನು ನಿರ್ಮಿಸಲಾಗುವುದು. ಅಲ್ಲದೇ ವನ್ಯಜೀವಿಗಳು ಸೇವಿಸುವ ಸ್ಥಳೀಯ ಹಣ್ಣಿನ ಮರಗಿಡಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬೆಳಿಸಿ, ಅರಣ್ಯದ ಜೀವ ವೈವಿಧ್ಯತೆಯನ್ನು ಹೆಚ್ಚಿಸಲಾಗುವುದು ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂದೀಪ್ ಸೂರ್ಯವಂಶಿ ಅವರು ಹೇಳಿದ್ದಾರೆ.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA